# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 Volume:01 • ಸಂಚಿಕೆ:171 Issue:171 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 01.12.2023 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2



Spend LESS and get MORE publicity

BENEFITS OF ADVERTISING in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options

CALL US : 9448633038

Email us Your Advertisement Content to : hampitimes@gmail.com







## ಮೈಕ್ರೋ ನ್ಯೂಸ್

### ಹನುಮಸಾಗರದಲ್ಲಿ ಚಿಗುರು ಕಾರ್ಯಕ್ರಮ ಡಿಸೆಂಬರ್ 1ಕ್ಕೆ

**ಹಂಪಿ ಟೈಮ್ಸ್ ಕೊಪ್ಪಳ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2023-24ನೇ ಸಾಲಿನ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಚಿಗುರು ಕುಷ್ಟಗಿ ತಾಲೂಕಿನ ಹನುಮಸಾಗರದ ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಯಲ್ಲಿ ಡಿಸೆಂಬರ್ 1ರ ಸಂಜೆ 4 ಗಂಟೆಗೆ ನಡೆಯಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ ಅವರು ತಿಳಿಸಿದ್ದಾರೆ.

### ಮತದಾರರ ಪಟ್ಟಿ ವೀಕ್ಷಕರಾದ ಕೆ.ಪಿ.ಮೋಹನರಾಜ್ ಡಿ. 2ರಂದು ಕೊಪ್ಪಳಕ್ಕೆ

**ಹಂಪಿ ಟೈಮ್ಸ್ ಕೊಪ್ಪಳ**

ಸರ್ಕಾರದ ಕಾರ್ಯದರ್ಶಿಗಳು ಹಾಗೂ ಮತದಾರರ ಪಟ್ಟಿ ವೀಕ್ಷಕರು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನರಾಜ್ ಅವರು ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದ ಅಂಗವಾಗಿ ಡಿಸೆಂಬರ್ 02ರಂದು ಕೊಪ್ಪಳ ಜಿಲ್ಲೆಗೆ ಭೇಟಿ ನೀಡಲಿದ್ದಾರೆ.

ಡಿಸೆಂಬರ್ 02 ಮತ್ತು ಡಿಸೆಂಬರ್ 03ರಂದು ಭಾರತ ಚುನಾವಣಾ ಆಯೋಗವು ಆಯೋಜಿಸಿರುವ ವಿಶೇಷ ಅಭಿಯಾನ ಕಾರ್ಯಕ್ರಮದ ಪರಿಶೀಲನೆಗಾಗಿ ಅವರು ಕೊಪ್ಪಳ ಜಿಲ್ಲೆಗೆ ಭೇಟಿ ನೀಡಲಿದ್ದು, ಮತದಾರರ ಪಟ್ಟಿ ವಿಶೇಷ ಅಭಿಯಾನ ಕಾರ್ಯಕ್ರಮದ ಬಗ್ಗೆ ತಿಳಿಯಲು ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಲಿದ್ದಾರೆ.


ಮತದಾರರ ಪಟ್ಟಿ ವೀಕ್ಷಕರಾದ ಕೆ.ಪಿ.ಮೋಹನರಾಜ್ ಅವರು ಡಿಸೆಂಬರ್ 2ರಂದು ಕೊಪ್ಪಳ ಜಿಲ್ಲೆಯಲ್ಲಿ ಲಭ್ಯವಿರಲಿದ್ದಾರೆ. ಆದ್ದರಿಂದ ಸಾರ್ವಜನಿಕರು, ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಯಾವುದೇ ಕುಂದು ಕೊರತೆಗಳು, ಅಹವಾಲುಗಳಿದ್ದಲ್ಲಿ ಮಾನ್ಯರ ಮೊಬೈಲ್ ಸಂಖ್ಯೆ:9449530000 ಗೆ ಕರೆ ಮಾಡಿ ಮಾತನಾಡಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.


PLACE YOUR AD
HOUSE RENT / SALE / LEASE, CHANGE OF NAME,
Notice Advertisement. & EVENT COVERAGE
Contact
9448633038
Near Valmiki Circle, HOSAPETE-583201
Email:hampitimes@gmail.com


# ಇದ್ದೂ ಇಲ್ಲವೆಂದವರಿಗಿಲ್ಲ ನೆಮ್ಮದಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಧನಾತ್ಮಕ ಚಿಂತನೆಗಳೆ ನೆಮ್ಮದಿಗೆ ಆಧಾರ | ಕನಕದಾಸರ 536ನೇ ಜಯಂತ್ಯೋತ್ಸವ



**ಹಂಪಿ ಟೈಮ್ಸ್ ಹೊಸಪೇಟೆ**

ಕುಲ ಕುಲವೆಂದು ಹೊಡೆದಾಡದಿರಿ, ಕುಲದ ನೆಲೆಯೆನೇನಾದರೂ ಬಲ್ಲಿರಾ ಎಂದು ಜಾತಿ ವ್ಯವಸ್ಥೆಯನ್ನೇ ವಿರೋಧಿಸಿ ದೈವತ್ವದಲ್ಲಿ ಅಪಾರ ನಂಬಿಕೆ ಇಟ್ಟಿದ್ದ ದಾಸಶ್ರೇಷ್ಠ ಕನಕದಾಸರು ಮಹಾಪುರುಷರಾಗಿದ್ದಾರೆ. ಅವರ ಆದರ್ಶ ಚಿಂತನೆಗಳನ್ನು ಅಳವಡಿಸಿಕೊಂಡವರು ಸದಾ ನೆಮ್ಮದಿಯ ಬದುಕು ಕಾಣಬಲ್ಲರು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅಭಿಪ್ರಾಯಪಟ್ಟರು.

ನಗರದ ಕನಕದಾಸ ವೃತ್ತದಲ್ಲಿ ವಿಜಯನಗರ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹೊಸಪೇಟೆ ನಗರಸಭೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ದಾಸ ಶ್ರೇಷ್ಠ ಶ್ರೀ ಕನಕದಾಶರ ಜಯಂತ್ಯೋತ್ಸವವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದರು. ವೈಭವ ಇದ್ದರೂ ಅವರು ವೈರಾಗ್ಯ ಅನುಭವಿಸಿ, ಸಮಾಜ ಅಂಕುಡೊಂಕುಗಳನ್ನು ತಮ್ಮ ಸರಳ ಪದ್ಯಗಳು, ಕವಿತೆ, ಕವನಗಳ ಮೂಲಕ ಜನಜಾಗೃತಿಗೊಳಿಸಿದರು. ಭಕ್ತಿ ಪಂಥದಲ್ಲಿ ಬಂದ ದಾಸಶ್ರೇಷ್ಠರಾಗಿದ್ದಾರೆ. ಕನಕದಾಸರು ಮತ್ತು ಪುರಂದರದಾಸರು ಅಶ್ವಿನಿ ದೇವತೆಗಳಿದ್ದಾರೆ ಎಂಬ ಮಾತಿದೆ. ಮನುಷ್ಯ ಮಾತನಾಡುವ ಮಾತು, ಯೋಚನೆಗಳಿಗೆ ತಥಾಸ್ತು ಎನ್ನುತ್ತಾರೆಂಬ ನಂಬಿಕೆಯೂ ಇದೆ. ಹಾಗಾಗಿ ಎಲ್ಲರೂ ಎಲ್ಲಾ ಕ್ಷಣಗಳಲ್ಲೂ ಒಳಿತನ್ನೇ ಮಾತನಾಡಬೇಕು. ತಮಗೆ ಮತ್ತು ಮತ್ತೊಬ್ಬರಿಗೆ ಒಳಿತನ್ನೆ ಬಯಸಬೇಕು. ಏನೇ ಮಾತನಾಡಿದರೂ ತಥಾಸ್ತು ಎನ್ನುತ್ತಾರೆ. ಅದು ಹಾಗೆ ಆಗುತ್ತದೆ ಎಂಬ ನಂಬಿಕೆ ಇಂದಿಗೂ ಇದೆ. ಹಾಗಾಗಿ ಪ್ರತಿಯೊಬ್ಬರು ಎಲ್ಲಾ ಸಂದರ್ಭಗಳಲ್ಲು ಉತ್ತಮ ಹಾಗೂ ಧನಾತ್ಮಕ ಚಿಂತನೆಗಳಲ್ಲಿ ತೊಡಗಬೇಕು. ದೇವರು ಎಲ್ಲವನ್ನು ಕೊಟ್ಟಿದ್ದರೂ ಏನಿಲ್ಲವೆಂದು ಹಸಿಸುಳ್ಳು ನುಡಿಯಬಾರದು. ಇರುವುದಲ್ಲರೆ ನೆಮ್ಮದಿಯಿಂದಿದ್ದೇನೆ ಎಂದು ಹೇಳಬೇಕು. ಮತ್ತೊಬ್ಬರಿಗೆ ಕೊಡುವ ಶಕ್ತಿ ಭಗವಂತ ಕೊಟ್ಟಿದ್ದರೂ ಇಲ್ಲವೆನ್ನಬಾರದು. ಒಂದು ವೇಳೆ ಆಕ್ಷಣದಲ್ಲಿ ಅಶ್ವಿನಿದೇವತೆಗಳು ತಥಾಸ್ತು ಎಂಂದರೆ ಅದು ಇಲ್ಲವಾಗಿಬಿಡಬಹುದು. ಇಂದಿನ ಜನರಿಗೆ ಎಷ್ಟು ದುಡಿದರೂ ಸಮಾಧಾನವಿಲ್ಲ. ಹೇಗಿದ್ದೀರಿ ಎಂದರೂ ಏನೂ ಸುಖವಿಲ್ಲ ಅಂತಾರ. ನಾನು ಚೆನ್ನಾಗಿದ್ದೇನೆ. ನೆಮ್ಮದಿಯಾಗಿದ್ದೇನೆ. ದುಡಿಮೆ ಚೆನ್ನಾಗಿದೆ ಅಂತ ಯಾರು ಅನ್ನೋದಿಲ್ಲ. ಅಂದವರೆಲ್ಲರೂ ಚೆನ್ನಾಗಿದ್ದಾರೆ. ಅನ್ನದವರು ಹಾಗೇ ಇದ್ದಾರೆ. ಎಲ್ಲದಕ್ಕೂ ಅಶ್ವಿನಿ ದೇವತೆಗಳ ಆಶೀರ್ವಾದವೇ ಸರಿ. ಅಶ್ವಿನಿ ದೇವತೆಗಳ ರೂಪದಲ್ಲಿ ಕನಕದಾಸರ ವಚನಗಳು ರಚನೆಯಾಗುತ್ತಿದ್ದವು. ಅವು ಜೀವನದಲ್ಲಿ ನಿಜ ಎನ್ನಿಸುತ್ತಿದ್ದವು. ಅವರ ಚಿಂತನೆಗಳು ಶಾಶ್ವತವಾಗಿವೆ. ತತ್ವಜ್ಞಾನಿ, ಕೀರ್ತನಕಾರರು ಅಪಾರ ಜ್ಞಾನ ಹೊಂದಿದ್ದರೂ ಸಾಮಾನ್ಯ ಮನುಷ್ಯರಂತೆ ಬದುಕಿದರು. ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸರಳ ಕನ್ನಡ ಸಾಹಿತ್ಯ ರಚಿಸಿದ್ದಾರೆ. ಸಾಮಾನ್ಯರೂ ಅರ್ಥೈಸಿಕೊಳ್ಳಬಲ್ಲ ಸಾಹಿತ್ಯ ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಅವರ ಮಾರ್ಗದರ್ಶನದ >>3

## ಮಾನವೀಯ ಧರ್ಮವೇ ದೊಡ್ಡದು

### ಸಮಾಜಿಕ ಚಿಂತಕ ವೈ.ಎನ್.ಗೌಡರ್ ಹೇಳಿಕೆ ಕನಕದಾಸರ ಜೀವನ ವೈಭವದಿಂದ ವೈರಾಗ್ಯದತ್ತ

ಸಮಾಜಿಕ ಚಿಂತಕ ವೈ.ಎನ್.ಗೌಡರ್ ಮಾತನಾಡಿ, 15ನೇ ಶತಮಾನ ಮತ್ತು ಇಂದಿನ ಬದುಕಿನ ನಡುವೆ ಇಂದು ಚಿಂತನೆಗಳು ನಡೆಯಬೇಕೇ ಹೊರತು ಚಿಂತೆ ಮಾಡಬಾರದು. ಅಕ್ಷರ ಪೋಣಿಸಿ ಮಾತನಾಡುವ ಕಲೆ ರೂಢಿಸಿಕೊಂಡರೆ ಸಾಲದ ಅವುಗಳನ್ನು ಅಪ್ಪಿಕೊಂಡು ನಡೆಯಬೇಕು. ಅಂದಿನ ಶ್ರೇಣಿಕೃತ ಸಮಾಜದಲ್ಲಿ ಕನಕದಾಸರು ವರ್ಗಬೇಧ, ಜಾತಿ ಬೇಧ ಕಿತ್ತೊಗೆಯಲು ಸಾತ್ವಿಕ ಹೋರಾಟ ಮಾಡಿದ್ದಾರೆ. ಶರಣರ ಚಳವಳಿ ನಂತರ ದಾಸ ಚಳವಳಿಗೆ ನಾಂದಿಯಾದರು. ವೈಭವದ ಜೀವನದಿಂದ ವೈರಾಜ್ಯ ಜೀವನಕ್ಕೆ ಕಾಲಿಟ್ಟರು. ಆತ್ಮಹತ್ಯೆಗಿಂತ ಆತ್ಮಪರಿವರ್ತನೆಗೊಂಡರೆ ಶಾಶ್ವತಗಾಗಿ ಉಳಿಯಬಲ್ಲರು. ಕನಕದಾಸರು ಇತಿಹಾಸ ಪುರುಷರು ಪುರಾಣಪುರುಷರಲ್ಲ. ತಿಮ್ಮಪ್ಪ ನಾಯಕರಾಗಿದ್ದ ಅವರು ಕನಕನಾಯಕರಾದರು. ಅವರಿಗೊಲಿದ ಸಂಪತ್ತೆನ್ನೆಲ್ಲ ಸಮಾಜದ ಜನರೋದ್ಧಾರಕ್ಕಾಗಿ ಬಳಸಿದರು. ಇಲ್ಲದವರು ಆತ್ಮಸ್ಥೈರ್ಯ, ಮನೋಬಲ ಹೆಚ್ಚಿರುತ್ತದೆ. ಉಳ್ಳವರಿಗೆ ಆತ್ಮದೌರ್ಬಲ್ಯ ಹೆಚ್ಚಿರುತ್ತದೆ. ಈ ಜಗದಲ್ಲಿ ಎಲ್ಲ ಧರ್ಮಗಳಿಗಿಂತ ಮಾನವೀಯ ಮೌಲ್ಯಗಳಿರುವ ಧರ್ಮ ಗೆಲ್ಲಬೇಕು ಎಂದರು.




## ಗಜಾಪುರದ ಶ್ರೀ ಕೇದಾರೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ 2.50 ಲಕ್ಷ.ರೂ.ದೇಣಿಗೆ

**ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಗಜಾಪುರ ಗ್ರಾಮದ ಶ್ರೀ ಕೇದಾರೇಶ್ವರ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 2.50 ಲಕ್ಷ ರೂ.ಮೊತ್ತದ ಡಿಡಿಯನ್ನು ನೀಡಲಾಯಿತು.

ದೇವಸ್ಥಾನದ ಕಮಿಟಿಯ ಗೌರವ ಅಧ್ಯಕ್ಷ ಚನ್ನಬಸವನಗೌಡ್ರು ಮತ್ತು ಸಮಿತಿಯ ಪದಾಧಿಕಾರಿಗಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಜಯನಗರ ಜಿಲ್ಲೆಯ ನಿರ್ದೇಶಕ ಸತೀಶ್ ಶೆಟ್ಟಿ ವಿತರಿಸಿ, ಶೀಘ್ರದಲ್ಲಿ ಜೀರ್ಣೋದ್ಧಾರ ಕಾರ್ಯ ಪೂರ್ಣಗೊಂಡು ದೇವರ ದರ್ಶನಕ್ಕೆ ಭಕ್ತರಿಗೆ ಅವಕಾಶ ಸಿಗಲಿ ಎಂದರು.



ಈ ವೇಳೆ ಯೋಜನೆಯ ಕೊಟ್ಟೂರು ತಾಲೂಕು ಯೋಜನಾಧಿಕಾರಿಗಳಾದ ನವೀನ್ ಕುಮಾರ್ ಹೆಚ್.ಡಿ, ವಲಯ ಮೇಲ್ವಿಚಾರಕರು ಪ್ರದೀಪ್ ಕುಮಾರ್, ಯೋಜನೆಯ ಕೃಷಿ ಅಧಿಕಾರಿ ಮಹಾಂತೇಶ್, ಒಕ್ಕೂಟದ ಪದಾಧಿಕಾರಿಗಳು ಮತ್ತು ಯೋಜನೆ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಇದ್ದರು.

## ಜಿಲ್ಲಾ ಮಟ್ಟದ ಸಹ ಪಠ್ಯ ಸ್ಪರ್ಧೆ ಡಿ.05ರಂದು

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರುಗಳಿಗೆ ಜಿಲ್ಲಾ ಮಟ್ಟದ ಸಹ ಪಠ್ಯ ಚಟುವಟಿಕೆಗಳ ಸ್ಪರ್ಧೆಗಳನ್ನು ಡಿ.05ರಂದು ಬೆಳಿಗ್ಗೆ 10 ಗಂಟೆಗೆ ನಗರದ ಎಪಿಎಂಸಿ ಹತ್ತಿರದ ಹಿರಾಳಕುಡಂನ ಈಗ್ದಾ ರಸ್ತೆಯ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಏರ್ಪಡಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಉಮಾದೇವಿ.ಬಿ ಅವರು ತಿಳಿಸಿದ್ದಾರೆ.

**ಪ್ರಬಂಧ ಸ್ಪರ್ಧೆಯ ವಿಷಯಗಳು (ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ):**
ಗುಣಮಟ್ಟದ ಶಿಕ್ಷಣದಲ್ಲಿ ಸಮಕಾಲೀನ ಕಲಿಕಾ ಪದ್ಧತಿಗಳು, ಶಿಕ್ಷಣದಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಮತ್ತು ಮಹತ್ವ, ನನ್ನ ಕನಸಿನ ಗುಣ ಮಟ್ಟದ ಶಾಲೆ, ಶಿಕ್ಷಣ ಕಾಯ್ದೆ -2009, ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಶಿಕ್ಷಕರ ಪಾತ್ರ.

**ಪ್ರಬಂಧ ಸ್ಪರ್ಧೆಯ ವಿಷಯಗಳು (ಪ್ರೌಢಶಾಲಾ ಶಿಕ್ಷಕರಿಗೆ)**
ರಾಷ್ಟ್ರೀಯ ಶಿಕ್ಷಣ ನೀತಿ -2020, ಪ್ರೌಢ ಶಾಲಾ ಹಂತದಲ್ಲಿ ಕೌಶಲ್ಯ ಆಧಾರಿತ ಶಿಕ್ಷಣದ ಮಹತ್ವ, ಬಾಹ್ಯಾಕಾಶದಲ್ಲಿ ಭಾರತದ ಸಾಧನೆ, ಆನ್ ಲೈನ್ ಶಿಕ್ಷಣದ ಸಾಧಕ ಭಾದಕ, ಮಕ್ಕಳ ಕಲಿಕೆಯಲ್ಲಿ ಸಮೂಹ ಮಾಧ್ಯಮಗಳ ಮಹತ್ವ ಅನುಕೂಲ ಮತ್ತು ಅನಾನುಕೂಲಗಳು.

**ಚಿತ್ರಕಲಾ ಸ್ಪರ್ಧೆಯ ವಿಷಯಗಳು (ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ):**
ಹವಮಾನ ವೈಪರೀತ್ಯಗಳು, ಕಾಡು ಬೆಳಸಿ ದೇಶ ಉಳಿಸಿ, ಸ್ವಚ್ಛ ಭಾರತ.

**ಚಿತ್ರಕಲಾ ಸ್ಪರ್ಧೆಯ ವಿಷಯಗಳು (ಪ್ರೌಢಶಾಲಾ ಶಿಕ್ಷಕರಿಗಾಗಿ):**
ಮಕ್ಕಳ ಕಲಿಕೆ ಮೇಲೆ ಸಾಮಾಜಿಕ ನಡಾವಳಿಗಳ ಪ್ರಭಾವ, ಪರಿಸರ-ಮಕ್ಕಳ ವಿಕಾಸ, ಆನ್-ಲೈನ್ ಶಿಕ್ಷಣ ಮತ್ತು ಮಕ್ಕಳು.

ಈ ಮೇಲಿನ ಪ್ರಬಂಧ ಹಾಗೂ ಚಿತ್ರಕಲೆ ವಿಷಯಗಳಲ್ಲಿ ಒಂದನ್ನು ಮಾತ್ರ ಒಂದು ಗಂಟೆ ಮುಂಚಿತವಾಗಿ ಸ್ಥಳದಲ್ಲಿಯೇ ಘೋಷಣೆ ಮಾಡಲಾಗುವುದು. ತಾಲ್ಲೂಕು ಮಟ್ಟದಲ್ಲಿ ನಡೆದ ಸಹ ಪಠ್ಯ ಚಟುವಟಿಕೆಗಳ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ಶಿಕ್ಷಕರುಗಳು ತಪ್ಪದೇ ಭಾಗವಹಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ವಚನ ಅರಿವು

# ಅನುಭಾವ ಘನ

**ವೇದ ವಿಪ್ರರ ಬೋಧೆ, ಶಾಸ್ತ್ರ ಸಂತೆಯ ಮಾತು.**
**ಪುರಾಣ ಪುಂಡರ ಗೋಷ್ಠಿ, ಆಗಮ ಅನೃತದ ನುಡಿ.**
**ತರ್ಕ ವ್ಯಾಕರಣ ಕವಿತ್ವ ಪ್ರೌಢಿ.**
**ಇಂತಿವರಂಗದ ಮೇಲೆ ಲಿಂಗವಿಲ್ಲದ ಭಾಷೆ.**
**ಇದು ಕಾರಣ, ತನ್ನೊಳಗನರಿದ**
**ಅನುಭಾವದಿಂದ ಘನವಿಲ್ಲೆಂದ, ಕಲಿದೇವ.**
**– ಮಡಿವಾಳ ಮಾಚಯ್ಯ**

ವೇದಗಳು ಬ್ರಾಹ್ಮಣರ ಓದಿನ, ಭೋದನೆಯ ಸರಕುಗಳು, ಗ್ರಂಥಗಳು. ಇವು ಜನಸಾಮಾನ್ಯರ ಕೈಗೆ ತಲುಪುವವುಗಳಲ್ಲ, ಹಿತಕ್ಕಲ್ಲ. ಹಲವಾರು ವಿಷಯಗಳನ್ನು ಕೆಲವೇ ಜನವರ್ಗವು ತಮ್ಮ ಹಿತಕ್ಕಾಗಿ ಬಳಸುವ ಸರಕು, ಶಾಸ್ತ್ರ. ಅದು ಅರ್ಥವಿಲ್ಲದ ಮಾತು. ಕಾಲ್ಪನಿಕ ವಿಷಯಗಳನ್ನು ಕಾವ್ಯ, ಪುರಾಣವಾಗಿಸಿ ತಮ್ಮ ಅನುಕೂಲಕ್ಕಾಗಿ ಹೇಳುವ ಸುಳ್ಳುಗಳ ವಿಜೃಂಭಣೆಯು ಪುಂಡರ ಗೋಷ್ಠಿಗಳು. ಆಗಮಗಳು ಇಲ್ಲ ಸಲ್ಲದ ನಂಬಿಕೆಗಳನ್ನು ಸೃಷ್ಟಿಸಿ, ಸಂಪ್ರದಾಯಗಳೆಂದು ಸುಳ್ಳುಗಳನ್ನೇ ನಂಬಿಸಿರುವಂತವುಗಳಾಗಿವೆ. ತರ್ಕ, ವ್ಯಾಕರಣ ವಿಧ್ಯೆಯನ್ನು ಬಲ್ಲ, ಓದಿ ಪಾಂಡಿತ್ಯ ಗಳಿಸಿದ, ವಿದ್ಯೆ ನಮ್ಮ ಅಧಿಕಾರ ಎಲ್ಲರಿಗಲ್ಲವೆಂದು ತಿಳಿದಿದ್ದವರ ಪ್ರಲಾಪ. ತಮ್ಮನ್ನು ಶರಣರ ವಿಚಾರಗಳಿಗೆ ತೆರೆದುಕೊಳ್ಳದೆ ತಾವು ಶ್ರೇಷ್ಠವೆಂಬ ಹುಸಿತನದವರ ಅಂಗದಲ್ಲಿ ಲಿಂಗವಿಲ್ಲ ಹಾಗಾಗಿ ಇವರ ಭಾಷೆ ಜನಭಾಷೆಯಲ್ಲ. ತನ್ನ ಅರಿವನ್ನು ಕಂಡುಕೊಂಡು ಅನುಭಾವದಿಂದ ತತ್ವ, ತಿಳುವಳಿಕೆಯಿಂದ ಬದುಕಿದರೆ ಘನವಸ್ತುವಾದ ಜಗತ್ತಿನ ಚೈತನ್ಯ ಶಕ್ತಿ ನಿರಾಕಾರ ಶಿವನ ಒಲುಮೆ ದೊರೆಯುತ್ತದೆ. ಹಾಗಾಗಿ ವೇದ, ಶಾಸ್ತ್ರ, ಪುರಾಣ, ಆಗಮ, ತರ್ಕ ಮುಂತಾದುವುಗಳು ಶ್ರೇಷ್ಠವಲ್ಲ. ತನ್ನ ಅರಿವೇ ಶ್ರೇಷ್ಠ. ಅರಿವೇ ಗುರು, ಶಿವ ಎನ್ನುತ್ತಾನೆ ವಚನಕಾರ ಮಾಚಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)


## ಸ್ಥಳೀಯ ಸಮಗ್ರ ಸುದ್ದಿಗಳಿಗಾಗಿ

ಹಂಪಿ ಟೈಮ್ಸ್ ದಿನಪತ್ರಿಕೆಯ ಚಂದದಾರರಾಗಿರಿ

**ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ, ಕೊಟ್ಟೂರು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ನಿಮ್ಮ ಸಮೀಪದ ಪತ್ರಿಕಾ ಏಜೆಂಟರನ್ನು ಕೇಳಿ ಪಡೆಯಿರಿ**

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.


ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**


ಇ-ಮೇಲ್:hampitimes@gmail.com



## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.


# ನನ್ನಂತರಾತ್ಮ ನನಗೆ ಭೇಟಿಯಾದಾಗ



ಯಾಕೆ, ಯಾಕೆ, ಯಾಕೆ ???....

ಈ ಪ್ರಶ್ನೆಯೊಂದೆ ನನ್ನ ಮನಸ್ಸನ್ನು ಸದಾ ಕೊರೆಯುತ್ತಿರುತ್ತದೆ. ಅದನ್ನ ನನಗೆ ನಾನೇ ಕೇಳಿಕೊಂಡು ಕೇಳಿಕೊಂಡು ನನ್ನ ಕಣ್ಣೀರಿನ ಬುಗ್ಗೆಯು ಜಲಪಾತ ಧುಮುಕುವ ರಭಸದಷ್ಟೇ ಜೋರಾಗಿ ಧುಮುಕಿಬರುತ್ತಿದ್ದವು. ಆದರೆ ಕಾರಣ ಮಾತ್ರ ಸ್ಪಷ್ಟವಾಗಿ ತಿಳಿಯಲೇ ಇಲ್ಲ.


ಅದೇನೋ ಗೊತ್ತಿಲ್ಲ ಯಾಕಂತ, ನನ್ನ ನಂಬಿಕೆ ಮತ್ತು ಪ್ರೀತಿಗೆ ಪಾತ್ರವಾದವರೇ ನನ್ನ ನಂಬೋದಿಲ್ಲ, ನನ್ನ ಜೊತೆಗಿರುವುದಿಲ್ಲ. ನಾ ಇಷ್ಟಪಟ್ಟಿದ್ದೆಲ್ಲಾ ಕಂಡ ಕನಸಿನಂತೆ ಮಾಯಾವಾಗುತ್ತವೆ ಯಾಕೆ?.. ಮತ್ತೆ ಅದೇ ಪ್ರಶ್ನೆ ನನ್ನಲ್ಲಿ. ಯಾಕೆ ನಾನು ಮಾಡಿದ್ದೆಲ್ಲಾ ತಪ್ಪಾ? ಅವರ ಸ್ನೇಹ, ನಂಬಿಕೆ, ಪ್ರೀತಿ ಬಯಸಿದ್ದೆ ತಪ್ಪಾಯಿತಾ ಅಥವಾ ಅದನ್ನ ಅವರಿಗೆ ನೀಡಿದ್ದು ಅತಿಯಾಯಿತಾ?..ಮತ್ತೆ ಅದೇ ಕಾರಣದ ಬೆನ್ನತ್ತಿ ಹೊರಟಿತ್ತು ಮನಸ್ಸು. ಬಹಳಷ್ಟು ಪ್ರಶ್ನೆಗಳ ಸರಮಾಲೆ,ನಾನಷ್ಟು ಕೆಟ್ಟವಳಾ? ಅವರಿಗೆ ಕಿಂಚಿತ್ತೂ ಖುಷಿಯ ನೀಡಲಾಗದ ಅಸಹಾಯಕಿಯಾ? ನನ್ನ ಕಂಡು ಅವರ ಮುಖದ ಮೇಲೆ ನಗು ಬರಲಾರದಷ್ಟು ಕೂರುಪಿಯಾ? ನಾನೆಂದರೆ ಅಷ್ಟು ಅಸಹ್ಯವಾ? ಅವರ ನಂಬಿಕೆಗೆ ನಾನು ಅನರ್ಹಳಾ? ಏನದು ಕಾರಣ ನನಗೆ ಅರ್ಥವಾಗದ ಕಾರಣ ಏನದು....

ಇದನ್ನೇ ಚಿಂತಿಸಿ ಚಿಂತಿಸಿ ಕೊರಗುವ ಹೊತ್ತಿಗೆ, ಅದೇನೊ ಅಂತರಾತ್ಮವಂತೆ ನಾನದನ್ನೂ ಇಲ್ಲಿಯವರೆಗೂ ಕಂಡಿರಲಿಲ್ಲ, ಅದರೊಂದಿಗೆ ಮಾತನಾಡಿರಲಿಲ್ಲ. ಅಂದು ಅದೇನಾಯಿತೋ ನನ್ನ ಚಿಂತನೆಯನ್ನು ಕಂಡು ಅದಾಗಿಯೇ ನನ್ನೊಂದಿಗೆ ಮಾತಿಗಿಳಿದು ಬಿಟ್ಟಿತು. ಅದೇಗೆ ಮಾತನಾಡುತ್ತದೆಂದು ನೀವದರ ಜೊತೆಗೆ ಮಾತನಾಡಿದಾಗಲೇ ಅರ್ಥವಾಗುತ್ತದೆ. ನನಗೆ ಕೇಳಿತದು "ಏನದು? ಏನು ನಿನ್ನ ಸಮಸ್ಯೆ? ಏಕೆ ಹುಚ್ಚಿಯಂತೆ ತಲೆಯನ್ನು ಪರಪರ ಅಂತ ಕೆರೆದುಕೊಳ್ಳುತ್ತಾ ಅಷ್ಟು ಚಿಂತಿಸುತ್ತಿರುವೆ?ಏನದು" ಎಂದು ಒಮ್ಮೆಲೇ ಕೇಳಿಬಿಟ್ಟಿತು. ನಾನು ಇದ್ಯಾರಪ್ಪ ನನ್ನ ಪ್ರಶ್ನೆ ಮಾಡೊದಕ್ಕೆ, ನನ್ನಿಷ್ಟ ಕಷ್ಟ ಕೇಳೊದಕ್ಕೆ ಅಂತ ಸುಮ್ಮನಾದೆ. ಆದರೆ ಚಿಂತೆಗೀಡಾಗಿದ್ದ ಮನಸ್ಸಿಗೆ ಮಾತಾಡಲು ಯಾರಾದರೂ ಸಿಕ್ಕರೆ ಸಾಕು ಎಂಬಂತೆ ನನ್ನ ಮಾತು ತಾನಾಗಿಯೇ ನಿಧಾನವಾಗಿ ಹೊರಬರತೊಡಗಿದವು. "ಚಿಂತೆ ಯಾಕೆಂದರೆ ಏನು ಅಂತ ಹೇಳಲಿ ನಿನಗೆ ಹಾಗೇ ಆಗುತ್ತದೆ. ನನ್ನೊಂದಿಗೂ ಕಷ್ಟ ಸುಖದಲ್ಲಿ ಯಾರಾದರೂ ಇರಬೇಕು. ನಾನು ಅವರೊಂದಿಗೆ ಮನಸ್ಸು ಬಿಚ್ಚಿ ಮಾತಾಡಬೇಕು. ಅವರ ಪ್ರೀತಿ ಗಳಿಸಬೇಕು, ನನ್ನವರು ಅಂತ ಹೇಳಿಕೊಳ್ಳಲು ಅವರು ಬೇಕು ಅನಿಸುತ್ತದೆ. ಆದರೆ ಅದು ಸಾಧ್ಯವಾಗದ ಮಾತು, ನನ್ನವರು ನನ್ನ ನಂಬೋದೆ ಇಲ್ಲ, ನನ್ನೊಂದಿಗೆ ಮಾತಾಡುವುದಿಲ್ಲ, ನನ್ನೊಂದಿಗೆ ಇರುವುದಿಲ್ಲ, ಬೇಗ ನನ್ನಿಂದ ದೂರವಾಗಿಬಿಡುತ್ತಾರೆ .. ಯಾಕೆ ಅಂತ ತಿಳಿಯದೆ ಅಳು ಬಂದು ಇಷ್ಟು ಚಿಂತಿಸುತ್ತಿರುವೆ. ನಾನೇನು ಮಾಡಲಿ, ಎಲ್ಲರನ್ನೂ ಬಿಟ್ಟು ದೂರ ಒಬ್ಬಂಟಿಯಾಗಿ ಇರಲು ನನಗೆ ಸಾಧ್ಯವಾಗುತ್ತಿಲ್ಲ. ಮಾನವ ಸಮಾಜ ಜೀವಿಯೆಂಬಂತೆ ಅವರಿವರ ಸಂಗ ಬಯಸಲು ಮುಂದಾಗುತ್ತದೆ ನಾನೇನು ಮಾಡಲಿ " ಎಂದು ಕಣ್ಣಂಚಲ್ಲಿ ನೀರು ತುಂಬಿಕೊಂಡು ಅದಕ್ಕೆ ಹೇಳಿದೆ..


ಒಂದು ಕ್ಷಣ ಅದು ಕೂಡ ಮೌನವಾಗಿತ್ತು. ನಂತರ ಸಮಾಧಾನದಿಂದ ತನ್ನ ಮಾತನ್ನು ಶುರು ಮಾಡಿತು, ನಾನು ಸುಮ್ಮನೆ ಅದರ ಮಾತನ್ನಾಲಿಸತೊಡಗಿದೆ "ನೋಡು ನಿನ್ನಲ್ಲಿ ಯಾವುದೇ ದೋಷಗಳಿಲ್ಲ, ಆದರೆ ನಿನಗೆ ಈ ಸಮಾಜದ ಬಗ್ಗೆ ಅರಿವಿಲ್ಲ ಅಷ್ಟೇ, ಇಲ್ಲಿ ಯಾರು ಶಾಶ್ವತವಲ್ಲ, ಎಲ್ಲಾ ಕ್ಷಣಿಕವಷ್ಟೇ. ಯಾವಾಗ, ಯಾರು, ಹೇಗೆ, ಎಲ್ಲಿ, ಯಾರನ್ನ ಬಿಟ್ಹೊಗುತ್ತಾರೊ ಗೊತ್ತಿಲ್ಲ, ನೀನಿದನ್ನು ಮೊದಲು ಅರಿತುಕೊಂಡು ಸಮಾಧಾನಪಟ್ಟಿಕೊ. ನಿನ್ನವರು ಸದಾ ಜೊತೆಗಿರಲು ಸಾಧ್ಯವಿರುವುದಿಲ್ಲ, ಅವರಿಗೆ ಅವರದೆ ಆದ ಜವಾಬ್ದಾರಿ,ಕನಸು ಹಾಗೂ ಕೆಲಸಗಳಿರುತ್ತವೆ, ಕೇವಲ ನಿನ್ನ ಜೊತೆಯಿದ್ದರೆ ಅವರು ಅದನ್ನು ನಿಭಾಯಿಸುವುದು ಹೇಗೆ?. ನಿನಗೆ ಕಷ್ಟ ಅಂತ ಬಂದಾಗ ಯಾರು ನಿನ್ನ ಸಮೀಪಕ್ಕೆ ಸುಳಿಯುತ್ತಾರೋ ಅವರು ಯಾವಾಗಲೂ ನಿನ್ನವರಾಗಿಯೇ ಇರುತ್ತಾರೆ, ದೈಹಿಕವಾಗಿ ಅಲ್ಲದಿದ್ದರೂ ಮಾನಸಿಕವಾಗಿ ಮನಸ್ಸಲ್ಲುಳಿಯುತ್ತಾರಷ್ಟೇ ಅದನ್ನ ನೀನು ಅರ್ಥ ಮಾಡಿಕೊ. ನಿನ್ನ ಯಾರು ನಂಬೋದಿಲ್ಲ ಅಂತ ನಿನ್ಯಾಕೆ ಅಂದುಕೊಳ್ಳುತ್ತಿಯಾ, ನಿನ್ನ ಮೇಲೆ ನಂಬಿಕೆಯಿಟ್ಟು ಬದುಕುತ್ತಿರುವವರು ಬಹಳಷ್ಟು ಜನವಿರುತ್ತಾರೆ, ನಿನ್ನ ಹಿಂದೆಯೆ ಇರುತ್ತಾರವರು, ನೀ ಕೇವಲ ನಿನ್ನ ಮುಂದಿರುವವರನ್ನಷ್ಟೇ ನೋಡಿದರೆ ಹಿಂದಿರುವವರು ಹೇಗೆ ಕಾಣಬಲ್ಲರು. ನೀನು ಕಷ್ಟ ಸುಖದಲ್ಲಿ ಯಾರಾದರೂ ಇರಬೇಕು ಅಂತಿಯಲ್ಲ ಅದು ಸರಿ ಆದರೆ ನಿನ್ನ ಕಷ್ಟವನ್ನ ಯಾರ ಹತ್ತಿರವು ಹೇಳಿಕೊಳ್ಳಬೇಡ, ಸಾಧ್ಯವಾದರೆ ನಿನ್ನ ಖುಷಿಯಲ್ಲಿ ಎಲ್ಲರಿಗೂ ಪಾಲು ನೀಡು. ನಿನ್ನ ಯಾರು ಪ್ರೀತಿಸದಿದ್ದರೂ ಪರವಾಗಿಲ್ಲ ನೀನು ಎಲ್ಲರನ್ನ ಪ್ರೀತಿಸು, ಅದರಲ್ಲೇ ನಿನ್ನ ಖುಷಿಯನ್ನ ಕಂಡ್ಕೊ ಅಷ್ಟೇ. ನೀನ್ ಹಿಂಗೆ ಚಿಂತಿಸುತ್ತಾ ಕೂತರೆ ನಿನ್ನ ಅಮೂಲ್ಯವಾದ ಸಮಯ ಹಾಳಾಗುತ್ತದಷ್ಟೇ. ಚಿಂತೆ, ದುಃಖ ಇವುಗಳೆಲ್ಲ ಬರದ ಹಾಗೆ ತಡೆದು ಖುಷಿ ಪಡಲು ಕಾರಣಗಳನ್ನ ಹುಡುಕಬೇಕು ಅದನ್ನೆಲ್ಲಾ ಬಿಟ್ಟು ಈ ತರಹ ಅಳುತ್ತಾ ಕೂತರೆ, ಜೀವನದ ಅಂತ್ಯದವರೆಗೂ ಹೀಗೆ ಅಳುತ್ತಲೇ ಕೂರಬೇಕಾಗುತ್ತದೆ. ಅರ್ಥವಾಯಿತಾ ನಾನು ಹೇಳಿದ್ದು. ನಿನಗೆ ಏನಾದರೂ ಮಾತನಾಡಬೇಕೆನಿಸಿದರೆ ನನ್ನೊಂದಿಗೆ ಮಾತನಾಡು ಅದನ್ನೆಲ್ಲಾ ಬಿಟ್ಟು ಚಿಂತೆ ಮಾಡುತ್ತಾ ಕೂರಬೇಡ, ಆಯ್ತಾ?? ಸರಿ ಎದ್ದೇಳು ಈಗ ಹೋಗಿ ಮುಖ ತೊಳೆದು ಸ್ವಲ್ಪ ನಗುವನ್ನ ಮುಖದಮೇಲಿರಿಸಿ ನಿನ್ನ ಕೆಲಸ ಮಾಡು ಹೋಗು.. ಬೈ ಬೈ" ಎಂದು ಹೇಳಿ ಮಾಯವಾಯಿತು.

ಒಂದು ಕ್ಷಣ ನನ್ನಂತರಾತ್ಮ ಹೇಳಿದ್ದೆಲ್ಲಾ ಸತ್ಯ ಎಂದೆನಿಸಿತು. ಅದರ ಧೈರ್ಯದ ಮಾತು ಕೇಳಿ ಇಷ್ಟೊತ್ತು ಸುಮ್ನೆ ಅತ್ತ್ನಲ್ಲಾ ನಾ ನ್ಂ ದಡ್ಡಿ ಎಂದು ಮನಸ್ಸಿನಲ್ಲೆ ನನ್ನ ನಾನೇ ಬೈದುಕೊಂಡೆ. ಅದು ಹೇಳಿದೆ ತರಹ ನಾನಿದ್ದರೆ ಬದುಕು ಸುಂದರವಾಗಿರುತ್ತದಲ್ಲವೇ ಎಂದೆನಿಸಿತು. ಆದರೆ ಆ ಕ್ಷಣಕ್ಕೆ ಮಾತ್ರ ನನ್ನಂತರಾತ್ಮವೇ ನನ್ನ ಪರಮಮಿತ್ರವಾಯಿತು.


**ಕು.ತ್ರಿವೇಣಿ ಆರ್. ಹಾಲ್ಕರ್(ಶ್ರೀಷಡ್ಯಜ)**
ಗೊಬ್ಬರವಾಡಿ ಕಲ್ಬುರ್ಗಿ ಜಿಲ್ಲೆ
ಕೃಷಿ ಮಹಾವಿದ್ಯಾಲಯ ಕಲಬುರ್ಗಿ
ವಿದ್ಯಾರ್ಥಿನಿ

# ಅಂಧರ ಪಾಲಿನ ಆಶಾಕಿರಣ... ಲೂಯಿ ಬ್ರೈಲ್






ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ


ಪ್ಯಾಟ್ಟ ಚಹಾ ಹೋಟೆಲ್ ನಲ್ಲಿ ಅಂಧ ವ್ಯಕ್ತಿಯೋರ್ವ ಚಹಾ ಸೇವಿಸುತ್ತಾ ಕುಳಿತಿದ್ದ. ಆತನ ಪಕ್ಕದ ಟೇಬಲ್ ನಲ್ಲಿ ಕುಳಿತ ವ್ಯಕ್ತಿ ಉಬ್ಬು ಅಕ್ಷರದಲ್ಲಿ ಬರೆದ ರಹಸ್ಯ ವಿಷಯವನ್ನು ಮಿಲಿಟರಿ ಅಧಿಕಾರಿಗಳು ಸರಳವಾಗಿ ಡೀಕೋಡ್ ಮಾಡಿ ಓದಿದ ಪರಿಣಾಮವಾಗಿ ಯುದ್ಧ ಕಾರ್ಯಾಚರಣೆಯಲ್ಲಿ ವಿಜಯ ಸಾಧಿಸಿದ ವಿಷಯವನ್ನು ಜೋರಾಗಿ ಓದಿದ. ರಾತ್ರಿಯ ವೇಳೆ ಬೆಳಕಿನ ಸಹಾಯವಿಲ್ಲದೆಯೂ ಈ ಉಬ್ಬು ಚಿತ್ರಗಳಲ್ಲಿನ ಸಂಕೇತಗಳ ಭಾಷೆಯನ್ನು ಅರ್ಥೈಸಿಕೊಳ್ಳಬಹುದು ಎಂಬುದನ್ನು ಅರಿತ ಆ ಅಂಧ ವ್ಯಕ್ತಿ ಅತ್ಯಂತ ಸಂತಸ ಪಟ್ಟ. ಆತನ ಅಂಧಕಾರದ ಬದುಕಿಗೆ ಅಶಾಜ್ಯೋತಿ ಗೋಚರಿಸಿತು.

ದಪ್ಪನೆಯ ಕಾಗದದ ಮೇಲೆ ಸೂಜಿಯಿಂದ ಚುಚ್ಚಿದಾಗ ಅದರ ಕೆಳಗಡೆ ಉಂಟಾಗುವ ಉಬ್ಬುಗಳನ್ನು ಅಕ್ಷರವಾಗಿ ಪರಿವರ್ತಿಸುವ, ನಿರ್ದಿಷ್ಟ ರಂಧ್ರಗಳಿಗೆ ನಿರ್ದಿಷ್ಟ ಅಕ್ಷರಗಳನ್ನು ಗುರುತಿಸಿ ಒಟ್ಟಿನಲ್ಲಿ ಆರು ರಂಧ್ರಗಳನ್ನು ಗುರುತು ಮಾಡಿ ನಂತರ ಅವುಗಳ ಮೇಲೆ ಬೆರಳು ಆಡಿಸಿ ಅಭ್ಯಾಸ ಮಾಡುವ ಪದ್ಧತಿಯನ್ನು ರಚಿಸಿ.. ನಿರಂತರ ಅಭ್ಯಾಸದ ಬಲದಿಂದ ದೃಷ್ಟಿ ಇರುವವರು ಓದುವ ವೇಗದಲ್ಲಿಯೇ ಅಂಧರು ಕೂಡ ಓದುವ ಲಿಪಿಯನ್ನು ಕಂಡುಹಿಡಿದ ಆತನೇ ಇಂದು ಜಗತ್ತಿನಲ್ಲೆಲ್ಲ ಪ್ರಸಿದ್ಧವಾದ...... ಅಂಧ ಜನರ ಪಾಲಿನ ಆಶಾಕಿರಣವಾದ ಫ್ರಾನ್ಸ್ ದೇಶದ ಲೂಯಿ ಬ್ರೈಲ್.

ಲೂಯಿ ಬ್ರೈಲ್ ತಂದೆ ಸೈಮನ್ ಓರ್ವ ಚಮ್ಮಾರ. ಪ್ಯಾರಿಸ್ ನಿಂದ ಸುಮಾರು ನಲವತ್ತು ಕಿಲೋಮೀಟರ್ ದೂರವಿರುವ ಕೋಪವ್ರೆ ಎಂಬ ಊರಿನಲ್ಲಿ ವಾಸವಾಗಿದ್ದ. ಸುತ್ತಿಗೆ, ಮೊಳೆ, ಚರ್ಮ ಮತ್ತು ಅಡಿಗಲ್ಲುಗಳೆ ಆತನ ಸಲಕರಣೆಗಳು. ಹದ ಮಾಡಿದ ಒಣಗಿದ ಚರ್ಮವನ್ನು ಅಡಿಗಲ್ಲಿನ ಮೇಲಿಟ್ಟು ಸುತ್ತಿಗೆ ಮೊಳೆಗಳ ಸಹಾಯದಿಂದ ಸರಿಯಾದ ಆಕಾರಕ್ಕೆ ತಂದು ಕುದುರೆಗೆ ಬೇಕಾಗುವ ಜೀನುಗಳನ್ನು ಆತ ಸಿದ್ದಪಡಿಸುತ್ತಿದ್ದ. ಚಿಕ್ಕ ಮಗುವಾಗಿದ್ದಾಗಿನಿಂದ ಪ್ರತಿದಿನವೂ ಅಂಗಡಿಗೆ ಬರುತ್ತಿದ್ದ ಆತನ ಮಗು ಲೂಯಿ ಕೂಡ ತಂದೆಯಂತೆಯೇ ಕೈಯಲ್ಲಿ ಅಳಿದುಳಿದ ಚರ್ಮವನ್ನು ಸುತ್ತಿಗೆ ಮತ್ತು ಮೊಳೆಗಳ ಸಹಾಯದಿಂದ ಆಕಾರಕ್ಕೆ ತರುವ ಆಟವಾಡುತ್ತಿದ್ದ. ಹೀಗೆ ಒಂದು ದಿನ ಆಟವಾಡುವಾಗ ಮೊಳೆಯು ಜೋರಾಗಿ ಕಣ್ಣಿಗೆ ತಾಕಿ ಒಂದೇ ಸಮ ರಕ್ತ ಸುರಿಯಿತು... ಕಣ್ಣಿನ ನರಗಳಲ್ಲಿ ಬಾಧೆ ಉಂಟಾಗಿ ಸೋಂಕಿಗೊಳಗಾಯಿತು. ಕಣ್ಣು ಕುರುಡಾಯಿತು. ಕೆಲವೇ ದಿನಗಳಲ್ಲಿ ಇನ್ನೊಂದು ಕಣ್ಣು ಕೂಡ ಸೋಂಕಿಗೊಳಗಾಗಲು ಆ ಮಗು ಸಂಪೂರ್ಣವಾಗಿ ಕತ್ತಲ ಪ್ರಪಂಚಕ್ಕೆ ಜಾರಿತು.


ಕುಳಿತಲ್ಲಿಯೇ ಕುಳಿತು ಕೊಳ್ಳುತ್ತಿದ್ದ ಮಗು ಜೊತೆಗಾರರೊಂದಿಗೆ ಆಟವಾಡಲು ಬಯಸುತ್ತಿತ್ತು. ಮೊದಮೊದಲು ಆತನನ್ನು ಆಟಕ್ಕೆ ಸೇರಿಸಿಕೊಳ್ಳದ ಮಕ್ಕಳು ಕ್ರಮೇಣ ಆತನನ್ನು ಆಟದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು.. ತನಗೆ ಗೊತ್ತಿಲ್ಲದ ವಿಷಯಗಳನ್ನು ಅರಿತುಕೊಳ್ಳುವಲ್ಲಿ ಆತನು ತೋರುವ ಕುತೂಹಲ ಎಲ್ಲರಿಗೂ ಸೋಜಿಗದ ಸಂಗತಿಯಾಗಿತ್ತು. ಆಟವಾಡುವಾಗ ಮಕ್ಕಳು ತಪ್ಪು ಉತ್ತರ ಹೇಳಿದರೆ, ಬಾಲಕ ಲೂಯಿ ಕೂಡಲೇ ಸರಿಯಾದ ಉತ್ತರವನ್ನು ಹೇಳುತ್ತಿದ್ದ. ಆತನ ಎಷ್ಟೋ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿರಲಿಲ್ಲ.ಓಣಿಯ ಜನರು ನಿಧಾನವಾಗಿ ಆತನ ಜಾಣ್ಮೆ, ತಿಳುವಳಿಕೆಗಳಿಗೆ ಮೆಚ್ಚಿದರು.ಆತನ ನೆನಪಿನ ಶಕ್ತಿ, ಜ್ಞಾನ ಮತ್ತು ಓದುವ ಆಸಕ್ತಿಯನ್ನು ಮೆಚ್ಚಿದ ಶಾಲಾ ಶಿಕ್ಷಕರೊಬ್ಬರು ಆತನ ತಂದೆಗೆ ಹತ್ತಿರದ ಊರಿನ ಅಂಧರ ಶಾಲೆಗೆ ಸೇರಿಸಲು ಸಲಹೆ ನೀಡಿದರು. ಸೈಮನ್ ತಡ ಮಾಡದೆ ತನ್ನ ಮಗನನ್ನು ಪ್ಯಾರಿಸ್ ನ ಅಂಧರ ಶಾಲೆಗೆ ಭರ್ತಿ ಮಾಡಿದ. ಸರಿ ಸುಮಾರು ಎಂಟು ವರ್ಷಗಳ ಕಾಲ ಅಲ್ಲಿ ಸಂಗೀತ ಮತ್ತು ಅಕ್ಷರಾಭ್ಯಾಸವನ್ನು ಕಲಿತ ಲೂಯಿಗೆ ಅದೇ ಶಾಲೆಯಲ್ಲಿ ಶಿಕ್ಷಕ ಹುದ್ದೆಯು ಕೂಡ ದೊರೆಯಿತು. ಇದರಿಂದ ಕೊಂಚ ನಿರಾಳನಾದ ಲೂಯಿ ಬ್ರೈಲ್.

ಆ ಸಮಯದಲ್ಲಿ ಅಂಧರಿಗೆ ಕಾಗದದ ಮೇಲೆ ಗಟ್ಟಿ ಮಸಿಯಿಂದ ದಪ್ಪನಾದ ಅಕ್ಷರ ಬರೆದು ಅವುಗಳ ಮೇಲೆ ಬೆರಳು ಆಡಿಸಿ ಓದಿಸುತ್ತಿದ್ದರು. ಕಡ್ಡಿಗಳನ್ನು ಜೋಡಿಸಿ ಓದಿಸಲು ಪ್ರಯತ್ನಿಸುತ್ತಿದ್ದರು. ಮರಳಿನ ಮೇಲೆ ಉಬ್ಬು ಚಿತ್ರಗಳನ್ನು ರಚಿಸಿ ಓದಿಸುತ್ತಿದ್ದರು. ಮೇಣದಲ್ಲಿ ಅಕ್ಷರಗಳನ್ನು ಒಡಮೂಡಿಸಿ ಕಲಿಸುತ್ತಿದ್ದರು. ಆದರೆ ಇದಕ್ಕೆಲ್ಲ ಸಾಕಷ್ಟು ಸ್ಥಳಾವಕಾಶ ಮತ್ತು ಸಮಯ ಬೇಕಾಗುತ್ತಿತ್ತು. ಅಂಧರು ಸಾಮಾನ್ಯ ಜನರಂತೆ ಓದಲು ಸಾಧ್ಯವಾಗುತ್ತಿರಲಿಲ್ಲ. ಲೂಯಿ ಎಲ್ಲಾ ಅಂಧರಿಗೂ ಅನುಕೂಲವಾಗುವ ಲಿಪಿಯೊಂದನ್ನು ತಯಾರಿಸಬೇಕು ಎಂಬ ಆಶಯವನ್ನು ಹೊಂದಿದ್ದ, ಆದರೆ ಸೂಕ್ತ ಸಮಯ ಇನ್ನೂ ಬಂದಿರಲಿಲ್ಲ. ಈ ಸಮಯದಲ್ಲಿಯೇ ಚಹಾದ ಹೋಟೆಲ್ನಲ್ಲಿ ಮೇಲಿನ ಘಟನೆ ನಡೆದದ್ದು ಆತನ ಅಂಧ ಕಂಗಳಿಗೆ ಭರವಸೆಯ ಬೆಳಕು ಗೋಚರಿಸಿತು.

ದಪ್ಪನೆಯ ಕಾಗದದ ಮೇಲೆ ಸೂಜಿಯ ಮನೆಯಿಂದ ಚುಚ್ಚಿದರೆ ಕೆಳಭಾಗದಲ್ಲಿ ಉಬ್ಬು ಬರುವುದಷ್ಟೇ... ಹೀಗೆ ಹುಟ್ಟಿದ ರಂಧ್ರಗಳಿಂದ ಅಕ್ಷರ ಜ್ಞಾನ ಮಾಡಿಕೊಡತೊಡಗಿದ. ನಿರ್ದಿಷ್ಟ ರಂಧ್ರಗಳಿಗೆ ನಿರ್ದಿಷ್ಟ ಅಕ್ಷರ ಎಂದು ನಿರ್ಧರಿಸಿದ ಆತ ಕೊನೆಗೆ ಆರು ರಂಧ್ರಗಳನ್ನು ಗುರುತು ಮಾಡಿದ. ಅವುಗಳ ಮೇಲೆ ಬೆರಳು ಆಡಿಸಿ ಅಭ್ಯಾಸ ಮಾಡುವುದು ಸರಳವಾಯಿತು. ನಿರಂತರವಾದ ಅಭ್ಯಾಸದಿಂದ ದೃಷ್ಟಿ ಇರುವವರು ಓದುವ ವೇಗದಲ್ಲಿಯೇ ಅಂಧರು ಕೂಡ ಓದುವಂತಹ ಲಿಪಿಯನ್ನು ಸಿದ್ದಪಡಿಸಿದ. ಮುಂದೆ ಈ ಲಿಪಿಯನ್ನು ಅಂತರಾಷ್ಟ್ರೀಯ ಮಾನ್ಯತೆಗಾಗಿ ಫ್ರಾನ್ಸ್ ಸರ್ಕಾರಕ್ಕೆ ಕಳುಹಿಸಿದ. ಆದರೆ ಅಂಧರು ಓದುವುದಕ್ಕಾಗಿ ಮಾಡಿದ ಈ ರೀತಿಯ ಬಗ್ಗೆ ಯಾವುದೇ ರೀತಿಯ ಆಸಕ್ತಿ ತೋರದ ಸರ್ಕಾರ ಇದಕ್ಕೆ ಮಾನ್ಯತೆ ನೀಡದೆ ಹೋಯಿತು. ಇದು ಲೂಯಿಗೆ ಆಘಾತವನ್ನು ನೀಡಿತು. ಚಿಂತೆಯಿಂದ ಆತ ಕ್ಷಯ ರೋಗ ಬಾಧಿತನಾದ. ಅಂದು ಕ್ಷಯ ರೋಗಕ್ಕೆ ಯಾವುದೇ ಔಷಧಿ ಇಲ್ಲದೆ ಮುಂದೆ 1852ರ ಜನವರಿ 11ರಂದು ಲೂಯಿ ಮರಣ ಹೊಂದಿದ.

ಲೂಯಿಯ ಮರಣ ನಂತರ ಅಂಧರ ಬಾಳಿನಲ್ಲಿ ವಿಪರೀತ ಸಂಕಷ್ಟ ಉಂಟಾಯಿತು. ಆಗ ತನ್ನ ತಪ್ಪಿನ ಅರಿವಾದ ಸರ್ಕಾರ ಲೂಯಿ ಸಿದ್ಧಪಡಿಸಿದ ಮಾದರಿಗೆ ಮಾನ್ಯತೆ ಕೊಟ್ಟು ಅದನ್ನು ಬ್ರೈಲ್ ಲಿಪಿ ಎಂದು ಹೆಸರಿಸಿತು. ಇಂದಿಗೂ ಅಂಧರ ಬರವಣಿಗೆಗೆ ಬ್ರೈಲ್ ಅಕ್ಷರ ಎಂದು ಕರೆಯುತ್ತಾರೆ. 1929 ರಲ್ಲಿ ಬ್ರೈಲ್ ಅಕ್ಷರದ ಶತಮಾನೋತ್ಸವವನ್ನು ಆಚರಿಸಲಾಯಿತು. ವರ್ಥೋನ್ ನಗರದಲ್ಲಿ ಲೂಯಿ ಬ್ರೈನ್ ನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ತಮ್ಮ ಬಾಳಿನ ಆಶಾಕಿರಣವಾದರೂ ಲೂಯಿ ಬ್ರೈಲ್ ನ ಮೂರ್ತಿಯನ್ನು ವಿಶ್ವಾದ್ಯಂತದ ಅಂಧರು ಸಂದರ್ಶಿಸಿ, ಸ್ಪರ್ಶಿಸಿ ತಮ್ಮ ಹರ್ಷವನ್ನು ಗೌರವವನ್ನು ಸಲ್ಲಿಸುತ್ತಾರೆ.

ಮೊಳೆಯಿಂದಲೇ ಕಣ್ಣು ಕಳೆದುಕೊಂಡು ಮೊಳೆ(ಸೂಜಿ)ಯಿಂದಲೇ ಕಣ್ಣಿಲ್ಲದವರಿಗೆ ಅಕ್ಷರವನ್ನು ಸೃಷ್ಟಿಸಿದ ಲೂಯಿ ಬ್ರೈಲ್ ಅಂಧರ ಪಾಲಿನ ಆಶಾಕಿರಣ





**ಕವಿ ಮನಸು**

## ಕನಕನ ಸ್ವಗತ



ಖಡ್ಗದ ಮೊನೆಯ ಇಳಿಸಿದಂದೇ
ನಿನ್ನ ಹುಡುಕಿದೆ ಕೇಶವ
ಹುಡುಕಾಟದೊಳಗೇ 'ನೀ' ಅವಿತಿದ್ದೆಯೆಂದು
'ನಾ' ಅರಿದಂದು 'ನೀ' ತೋರಿದೆ ಅಂದು
ಕೇಶವ !

ಸಕಲ ಜೀವರಾದಿಯಾಗಿ
ಅಣುರೇಣುತೃಣಕಾಷ್ಠದೊಳಗಿರುವಿಯೆಂದು
'ನಾ' ಹಾಡಿದ ಹಾಡು
ಇವರ ಕಿವಿಗೆ ತಲುಪಲೇ ಇಲ್ಲ ಕೇಶವ !

ಕಿವಿ ಇದ್ದವರು, ಹೃದಯವಿದ್ದವರು,
ಕಣ್ಣಿದ್ದವರು, ತಲೆ ಇದ್ದವರೆಲ್ಲರೂ
ನನ್ನ ಕೀರ್ತನೆಗಳಿಗೆ ತಲೆದೂಗಿದರೇ ಹೊರತು
ಅರಿವಿನೊಳಗಿನ ಅರಿವ ಅರಿಯಲೇ ಇಲ್ಲ
ಕೇಶವ !

'ನಾ' ಅರಿತಾಗ 'ನೀ' ದೊರೆತೆ
ನಾನೀನೆಂಬುದನರಿಯದೇ ನಿನ್ನ
ಬಂದಿಯಾಗಿಸಿದರಲ್ಲೋ ಕೇಶವ !

ಎಲ್ಲೆಡೆಯೂ ಇರುವ ನಿನ್ನ ತೋರದೇ
ನಿನಗೊಂದು ನೆಲೆಯ ಸೃಷ್ಟಿಸಿದರಲ್ಲೋ ಕೇಶವ !

ನೀನಿರದೆ ನಾನಿಲ್ಲ, ನಾನಿರದೆ ನೀನಿಲ್ಲ
ಎಂಬ ತತ್ವವ ತಿಳಿಯದೇ
ಮಂದಿರ, ಜಾತಿ, ಮತಗಳಲಿ
ನನ್ನ, ನಿನ್ನ ಬಂದಿಯಾಗಿಸಿದರಲ್ಲೋ ಕೇಶವ !

ಮನುಜಮತ ಸಾರುವ ಅರಿವಿನ ಕಿಂಡಿಯ
ಇವರಿಗೆ ತೋರೋ ಕಾಗಿನೆಲೆ ಆದಿಕೇಶವ !

– ಸಿದ್ಧರಾಮ ಕೂಡ್ಲಿಗಿ

# ಹಾಲುಮತದವರು ಹಾಲಿನಷ್ಟೆ ಪರಿಶುದ್ಧರು

## ಕಾರ್ಮಿಕ ಸಚಿವ ಎಸ್.ಸಂತೋಷ್ ಲಾಡ್ ಹೇಳಿಕೆ । ಕೂಡ್ಲಿಗಿಯಲ್ಲಿ ಕನಕದಾಸರ ಜಯಂತ್ಯೋತ್ಸವ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ವಚನಗಳ ಮೂಲಕ ಸಮಾಜದ ಓರೆ, ಕೋರೆಗಳನ್ನು ತಿದ್ದಿ ಸಮ ಸಮಾಜದ ನಿರ್ಮಾಣಕ್ಕೆ ತಮ್ಮದೆ ಸಾಹಿತ್ಯದ ಮೂಲಕ ಹೋರಾಟ ಮಾಡಿದವರು ಭಕ್ತ ಕನಕದಾಸರು ಎಂದು ಕಾರ್ಮಿಕ ಸಚಿವ ಎಸ್.ಸಂತೋಷ್ ಲಾಡ್ ಹೇಳಿದರು. ಪಟ್ಟಣದ ಚಂದ್ರಶೇಖರ ಆಜಾದ ರಂಗಮಂದಿರದಲ್ಲಿ ಗುರುವಾರ ತಾಲೂಕು ಆಡಳಿತ ಹಾಗೂ ತಾಲೂಕು ಕುರುಬ ಸಮಾಜ ಹಮ್ಮಿಕೊಂಡ ಕನಕ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕುರುಬ ಸಮಾಜವು ಸಹ ಸಮಾಜವು ಇತರೆ ಸಮಾಜದೊಂದಿಗೆ ಅತ್ಯಂತ ಸಹಕಾರ, ಸಹಬಾಳ್ವೆಯಿಂದ ಹೊಂದಿಕೊಂಡು ಹೋಗುವ ಸಮಾಜವಾಗಿದೆ. ಭಕ್ತ ಕನಕದಾಸರ ಆಶಯದಂತೆ ನಾವುಗಳು ಸಹ ಮೇಲು, ಕೀಳು ಭಾವನೆಗಳನ್ನು ಬದಿಗೊತ್ತಿ ಸಮಾಜದ ಉನ್ನತಿಗೆ ಕಾರಣವಾಗಬೇಕು ಎಂದು ತಿಳಿಸಿದರು. ಕೂಡ್ಲಿಗಿ ವಿಧಾನಸಭಾ ಕ್ಷೇತ್ರವು ಅತ್ಯಂತ ಹಿಂದುಳಿದ ತಾಲೂಕಾಗಿದ್ದು, ಈ ಬಾರಿ ಯುವಕರಾದ ಅದರಲ್ಲೂ ಉತ್ತಮ ಜ್ಞಾನ ಹೊಂದಿರುವ ಡಾ.ಎನ್.ಟಿ.ಶ್ರೀನಿವಾಸ್ ಆಯ್ಕೆಯಾಗಿದ್ದು, ಅವರು ಸಹ ಎಲ್ಲಾ ಜನಾಂಗದವರನ್ನೂ ಸಮಾನವಾಗಿ ನೋಡುವ ವ್ಯಕ್ತಿಯಾಗಿದ್ದಾರೆ. ಕ್ಷೇತ್ರವನ್ನು ಅಭಿವೃದ್ಧಿ ಪಥದಲ್ಲಿ ಸಾಗಿಸುವ ಗುರಿ ಹೊಂದಿದ್ದಾರೆ. ಅವರಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.



ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಸರ್ವ ಜನಾಂಗದ ಶಾಂತಿ ತೋಟದಂತೆ ಎಲ್ಲಾ ಸಮುದಾಯದವರನ್ನೂ ಅತ್ಯಂತ ಪ್ರೀತಿಯಿಂದ ಮುನ್ನೆಡಿಸಿಕೊಂಡು ಹೋಗಿ ಮಾದರಿ ಕ್ಷೇತ್ರವಾಗಿ ಮಾಡುವ ಬಯಕೆ ಇದೆ. ಆ ನಿಟ್ಟಿನಲ್ಲಿ ಕ್ಷೇತ್ರದ ಪ್ರತಿಯೊಬ್ಬರ ಸಹಕಾರ ಅತ್ಯಗತ್ಯ ಎಂದ ಅವರು ಹಾಲುಮತ ಸಮುದಾಯವು ಹಾಲಿನಂತೆ ಪರಿಶುದ್ಧ ಮನಸ್ಸಿನವರು. ಕ್ಷೇತ್ರದಲ್ಲಿ ಅವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಸಮಾಜದ ಅಭಿವೃದ್ಧಿ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು. ಸ್ವಾವಲಂಬಿ ಜೀವನಕ್ಕೆ ಮತ್ತೊಂದು ಹೆಸರೆ ಕುರುಬ ಸಮಾಜವಾಗಿದ್ದು. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಅವರ ಶ್ರೇಯೋಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು. ಕೊಪ್ಪಳ ಜಿಲ್ಲೆಯ ಕಿನ್ನಾಳ ಪಪೂ ಕಾಲೇಜಿನ ಉಪನ್ಯಾಸಕಿ ಅರುಣ ನರೇಂದ್ರ ಪಾಟೀಲ್ ಕನಕದಾಸರ ಕುರಿತು ಉಪನ್ಯಾಸ ನೀಡಿದರು. ಇದೇ ಸಂಧರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರನ್ನ ಸನ್ಮಾನಿಸಲಾಯಿತು. ಸಂಡೂರು ಶಾಸಕ ಈ.ತುಕಾರಾಂ, ತಹಸೀಲ್ದರ್ ಎಂ. ರೇಣುಕಾ, ತಾಪಂ ಇಒ ವೈ. ರವಿಕುಮಾರ್, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ. ಗುರುಸಿದ್ದನ ಗೌಡ,ನಾಗಮಣಿ ಜಿಂಕಾಲ್, ಎನ್.ಟಿ.ತಮ್ಮಣ್ಣ, ಕುರುಬ ಸಮಾಜದ ತಾಲೂಕು ಅಧ್ಯಕ್ಷ ಬೊಪ್ಪಲಾಪುರ ಬಸವರಾಜ, ರಾಘವೇಂದ್ರ, ನಾಗರಾಜ್, ಕನಕಪ್ಪ, ಟಿ.ದೇವಪ್ಪ, ಓಬಣ್ಣ, ಮರುಳಸಿದ್ದಪ್ಪ, ಸಿ.ಬಿ.ಜಯರಾಮ ನಾಯಕ ಇತರರಿದ್ದರು.

# ಶಿಕ್ಷಕರಿಗೆ ನಾಲ್ಕು ತಿಂಗಳ ಬಾಕಿ ವೇತನ ಕೊಡಿಸಿ

## ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್ ಅವರಿಂದ ಮನವಿ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ವೇತನ ಬಿಡುಗಡೆಗೆ ಆರ್ಥಿಕ ಇಲಾಖೆಯ ಗಮನ ಸೆಳೆಯುವಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಗುರುವಾರ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಗೆ ಮನವಿ ಪತ್ರ ನೀಡಿದರು.



ಈ ಸಂಧರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್ ಮಾತನಾಡಿ, ಕೂಡ್ಲಿಗಿ ತಾಲೂಕಿನ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ ಸುಮಾರು 110 ಕ್ಕೂ ಹೆಚ್ಚು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು, ನಾಲ್ಕು ತಿಂಗಳಿನಿಂದ ವೇತನವಾಗಿಲ್ಲ. ಇದರಿಂದ ಶಿಕ್ಷಕರ ಕುಟುಂಬದ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಪಕ್ಕದ ತಾಲೂಕಿನಲ್ಲಿ ಬಿಇಒ ಕಚೇರಿ ಇಲ್ಲದೆ ಇದ್ದರು ಕೂಡ ವೇತನ ಅನುದಾನವು ಕೊಟ್ಟೂರು ತಾಪಂ ಗೆ ಬಿಡುಗಡೆ ಮಾಡಿರುತ್ತಾರೆ.

ಈ ಅನುದಾನವನ್ನು ಹಿಂಪಡೆದು ಕೂಡ್ಲಿಗಿ ತಾಲೂಕಿಗೆ ಬಿಡುಗಡೆ ಮಾಡುವಂತೆ ಕೋರಿ ಕಳೆದ ಎರಡು ತಿಂಗಳಿನಿಂದ ಆರ್ಥಿಕ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ ಇಲಾಖೆ ಹಾಗೂ ಕೆ2 ಕಚೇರಿಗೆ ನಿರಂತರ ಪತ್ರ ವ್ಯವಹಾರ ಮಾಡಿದ್ದೇವೆ. ಅಲ್ಲದೆ ಎರಡು ಬಾರಿ ಆರ್ಥಿಕ ಕಚೇರಿಗೆ ಖುದ್ದು ಭೇಟಿ ನೀಡಿ ಮನವಿ ಸಲ್ಲಿಸಿದರು, ಆರ್ಥಿಕ ಇಲಾಖೆಯಿಂದ ಸರಿಯಾದ ಸ್ಪಂದನೆ ಇಲ್ಲ. ಕೆಲವು ತಾಂತ್ರಿಕ ಕಾರಣಗಳಿಂದ ಕಡತಗಳನ್ನು ತಿರಸ್ಕರಿಸುತ್ತಿದ್ದಾರೆ.ಪ್ರಸ್ತುತ ಹೆಚ್ಚುವರಿ ವೇತನ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಪತ್ರ ಬರೆಯಲಾಗಿದೆ. ತಾಲೂಕಿನ ಶಿಕ್ಷಕರ ಸಂಕಷ್ಟ ಅರಿತು ತಾವುಗಳು ಆರ್ಥಿಕ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ಕೆ2 ಕಚೇರಿ ಅಧಿಕಾರಿಗಳನ್ನು ಸಂಪರ್ಕಿಸಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಒತ್ತಡ ಹೇರಿ ಶಿಕ್ಷಕರ ವೇತನ ಅನುದಾನ ಬಿಡುಗಡೆಗೊಳಿಸಲು ಸಹಕಾರಿಸಲು ಮನವಿ ಮಾಡಿದರು. ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮನವಿ ಸ್ವೀಕಾರ ಮಾಡಿ ಆರ್ಥಿಕ ಇಲಾಖೆ ಹೆಚ್ಚುವರಿ ಕಾರ್ಯದರ್ಶಿಗೆ ದೂರವಾಣಿ ಮೂಲಕ ಮಾತಾನಾಡಿ ಸಮಸ್ಯೆ ಬಗೆಹರಿಸಲು ಸ್ಥಳದಲ್ಲೇ ಮಾತನಾಡಿದರು. ಬಿಇಒ ಪದ್ಮನಾಭ ಕರ್ಣಂ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಎಸ್.ವಿ. ಸಿದ್ದರಾಧ್ಯ, ಕಾರ್ಯದರ್ಶಿ ಕೆ.ಎಚ್.ಎಂ.ಶಶಿಧರ, ಸನೌಸಂಘದ ಖಜಾಂಚಿ ಆರ್.ಬಿ. ಬಸವರಾಜ, ಸಿದ್ದಪ್ಪ, ಪದಾಧಿಕಾರಿಗಳಾದ ರಾಘವೇಂದ್ರ, ಉಡಚಪ್ಪ, ಮಹಾದೇವ, ಮಂಜುನಾಥ್, ದೇವರಾಜ್ ಸೇರಿದಂತೆ ಅನೇಕ ಶಿಕ್ಷಕರು ಇದ್ದರು.

# ಇದ್ದು ಇಲ್ಲವೆಂದವರಿಗಿಲ್ಲ ನೆಮ್ಮದಿ

**ಮೊದಲ ಪುಟದಿಂದ**

ನುಡಿಗಳು ಎಲ್ಲರ ಜೀವನದಲ್ಲಿ ಪರಿಪಾಠವಾಗಲಿ. ಹಾಲುಮತ ಸಮಾಜದ ಮೇಲೆ ಜನರಿಗೆ ಅಪಾರ ನಂಬಿಕೆ ಇದೆ. ಹಾಲುಮತದವರು ಕೊಟ್ಟ ಮಾತು, ಇಟ್ಟ ಕೈ ಎಂದೂ ಹುಸಿಯಾಗುವುದಿಲ್ಲ ಎಂಬ ನಂಬಿಕೆ ಇಂದಿಗೂ ಜೀವಂತವಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಮಾತನಾಡಿ, ಕನಕದಾಸರ ವಾಣಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅವರ ಆಶಯದಂತೆ ಬದುಕು ರೂಪಿಸಿಕೊಂಡರೆ ಕನಕದಾಸರ ತ್ಯಾಗ ಸಾರ್ಥಕಗೊಳಿಸಿದಂತಾಗುತ್ತವೆ. ಜೀವನಕ್ಕೆ ಬೇಕಾದ ಸರಳ ಸೂತ್ರಗಳನ್ನು ರಚಿಸಿದ್ದಾರೆ ಎಂದರು.

ಹಾಲುಮತ ಸಮಾಜದ ಜಿಲ್ಲಾಧ್ಯಕ್ಷ ಅಯ್ಯಾಳಿ ತಿಪ್ಪಮ್ಮ, ಮುಖಂಡರಾದ ಭರಮನಗೌಡ, ಮಲ್ಲಯ್ಯ ಒಡೆಯರ್, ಎಲ್.ಸಿದ್ದನಗೌಡ, ರಾಮಚಂದ್ರಗೌಡ, ಆರ್.ಕೊಟ್ರೇಶ, ಡಿ.ಚನ್ನಪ್ಪ, ಯುವ ಮುಖಂಡ ರವಿಕುಮಾರ್, ಎಚ್.ಜಿ.ವಿರೂಪಾಕ್ಷಿ, ನಗರಸಭೆ ಸದಸ್ಯರಾದ ಎಲ್.ಎಸ್.ಆನಂದ, ತಾರಳ್ಳಿ ಜಂಬುನಾಥ, ತಹಶೀಲ್ದಾರ ವಿಶ್ವಜೀತ್ ಮೆಹ್ತಾ ಸೇರಿದಂತೆ ಇತರರು ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಸಿದ್ಧಲಿಂಗೇಶ ರಂಗಣ್ಣವರ ಸ್ವಾಗತಿಸಿದರು. ಕೆ.ಬಸವರರಾಜ ನಿರೂಪಿಸಿದರು.

ಕಾರ್ಯಕ್ರಮಕ್ಕೂ ಮುನ್ನ ನಗರದ ಶ್ರೀ ಅಭಯಹಸ್ತ ಆಂಜನೇಯ ದೇವಸ್ಥಾನದಿಂದ ಕನಕದಾಸ ಭಾವಚಿತ್ರ ಮೆರವಣಿಗೆ ಆರಂಭಗೊಂಡು, ಗಾಂಧಿವೃತ್ತದದ ಮಾರ್ಗವಾಗಿ ಕನಕದಾಸ ವೃತ್ತದವರಗೆ ಡೊಳ್ಳು ಸೇರಿದಂತೆ ಕಲಾತಂಡಗಳೊಂದಿಗೆ ತೆರಳಿ ವೇದಿಕೆಗೆ ತಲುಪಿತು.




ಬಳ್ಳಾರಿಯಲ್ಲಿ ಜರುಗಿದ ಶ್ರೀ ಕನಕದಾಸರ ಜಯಂತ್ಯೋತ್ಸವದಲ್ಲಿ ಸಚಿವ ನಾಗೇಂದ್ರ, ಶಾಸಕ ನಾರಾ ಭರತರೆಡ್ಡಿ ಇತರರು ಮೆರವಣಿಗೆಯಲ್ಲಿ ಇದ್ದರು.

**ಇ–ಪೇಪರ್ ಉಚಿತ**
ಇಂದೇ ಹಂಪಿ ಟೈಮ್ಸ್ ವಾಟ್ಸ್‌ಪ್ ಚಾನಲ್‌ಗೆ ಸೇರಿ, ಇ–ಪೇಪರ್ ಉಚಿತವಾಗಿ ಪಡೆಯಿರಿ




**ತುಂಗಭದ್ರಾ ನೀರಿನ ಮಟ್ಟ**



| ಗುರುವಾರ : 30-11-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1593.28 ಅಡಿ |
| ಒಳ ಹರಿವು | 593 ಕ್ಯುಸೆಕ್ |
| ಹೊರ ಹರಿವು | 5155 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 13.989 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.56 ಅಡಿ |
| ಒಳ ಹರಿವು | 1869 ಕ್ಯುಸೆಕ್ |
| ಹೊರ ಹರಿವು | 7227 ಕ್ಯುಸೆಕ್ |
| ಸಾಮರ್ಥ್ಯ | 92.424 ಟಿಎಂಸಿ |

# ಕಾರ್ಮಿಕರಿಗೆ ಮರುಜೀವ ತಂದುಕೊಟ್ಟ ನಿಷೇಧಿತ ರ‍್ಯಾಟ್ ಹೋಲ್ ಮೈನಿಂಗ್ ಪದ್ಧತಿ

100 ಕೋಟಿ ಭಾರತೀಯರ ಪ್ರಾರ್ಥನೆ ಕೊನೆಗೂ ಫಲಿಸಿದೆ ಉತ್ತರಕಾಶಿಯ ಸುರಂಗದಲ್ಲಿ ಸಿಲುಕಿ ಹಾಕಿಕೊಂಡಿದ್ದ 41 ಜನ ಕಾರ್ಮಿಕರನ್ನು 17 ದಿನಗಳ ಸುದೀರ್ಘ ಕಾರ್ಯಾಚರಣೆ ನಂತರ ಕೊರತೆಗೆಯಲಾಗಿದೆ

ಅದೆಷ್ಟು ಅಡ್ಡಿ ಆತಂಕಗಳು ಎದುರಾದರು ಸರಿಸುಮಾರು 400 ಗಂಟೆಗಳ ಕಾಲ ನಡೆದ ಕಾರ್ಯಾಚರಣೆಯು ಯಶಸ್ವಿಯಾಗಿದೆ ಅಮೆರಿಕದಿಂದ ದೊಡ್ಡ ದೊಡ್ಡ ಯಂತ್ರಗಳು ಕೈಕೊಟ್ಟಾಗ ನಮ್ಮ ಕಾರ್ಮಿಕರ ಕೈಹಿಡಿದಿದ್ದು ಭಾರತದ ಸಾಂಪ್ರದಾಯಿಕ ಸುರಂಗತೋಡುವ ಮಾರ್ಗ ಅದೇ ಖಚಿಣ ಿಿಂಟಜ ಟುಟುಟಿಂ ಪದ್ಧತಿ ಅಂದರೆ ಇಲಿ ಬಿಲತ್ತುಡುವ ರೀತಿಯಲ್ಲಿ ಸುರಂಗ ಮಾರ್ಗ ಕೊರೆಯುವುದು ಹಾಗಾದರೆ ಏನು ಈ ಸುರಂಗ ಮಾರ್ಗ ಅದು ಯಾಕೆ ಬೇಕಾಗಿತ್ತು ಎಂಬುದರ ಹಿಂದಿನ ಕಥೆ ಹೀಗಿದೆ

ಹಿಂದುಗಳ ಪವಿತ್ರ ಜಾತ್ರೆಗಳಲ್ಲಿ ಒಂದಾದ ಚರ್ಧಾಮ್ ಯಾತ್ರೆ ಇದು ಬದ್ರಿನಾಥ್ ,ದ್ವಾರಕಾ , ಪೂರಿ, ಮತ್ತು ರಾಮೇಶ್ವರಂ ಕ್ಷೇತ್ರಗಳನ್ನು ಒಳಗೊಂಡಿದೆ, ಅದೇ ರೀತಿಯಲ್ಲಿ ಉತ್ತರಕಾಂಡ್ ನಲ್ಲಿರುವ ಯಮುನೋತ್ರಿ ಗಂಗೋತ್ರಿ ಕೇದಾರನಾಥ್ ಮತ್ತು ಬದ್ರಿನಾಥ್ ಯಾತ್ರೆಗಳು ಕೂಡ ಚಾರ್ಧಾಮ್ ಯಾತ್ರೆ ಎಂದು ಕರೆಯಲಾಗುತ್ತದೆ, ಈ ಮೇಲಿನ ನಾಲ್ಕು ಸ್ಥಳಗಳನ್ನು ಒಂದು ಗೂಡಿಸುವ ಯೋಜನೆಯನ್ನೇ ಚಾರ್ಧಾಮ್ ಯೋಜನೆ ಎನ್ನುವರು ಯೋಜನೆಯಡಿಯಲ್ಲಿ ಅಲ್ಲಿಯ ಎಲ್ಲಾ ರಸ್ತೆಗಳನ್ನು ಸುಧಾರಿಸಿ ಸುಮಾರು 900 ಕಿಲೋಮೀಟರ್ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ ಆದರೆ ಈ ಮಾರ್ಗದಲ್ಲಿ ಕೆಲವು ಕಡೆ ದೊಡ್ಡದಾದ ಬೆಟ್ಟ ಗುಡ್ಡಗಳು ಇರುವುದರಿಂದ ರಸ್ತೆ ನಿರ್ಮಾಣ ಕಾರ್ಯ ಕಷ್ಟ ಸಾಧ್ಯ ಅಂತಹ ಕಡೆ ಸೇತುವೆಗಳು ಮತ್ತು ಸುರಂಗಗಳನ್ನು ಮಾಡಬೇಕಾಗುತ್ತದೆ ಅಂತಹ ಪ್ರಯತ್ನದಲ್ಲಿಯೇ ಉತ್ತರ ಕಾಶಿಯಲ್ಲಿ ಸುರಂಗ ಮಾರ್ಗವನ್ನು ಗಂಗೋತ್ರಿ ಇಂದ ಯಮುನೊತ್ರಿಗೆ ಸಂಪರ್ಕ ಕಲ್ಪಿಸಲು ನಿರ್ಮಾಣ ಮಾಡಲಾಗುತ್ತಿತ್ತು ಇದು ಸಿಲಿಕಿಯ ಎಂಬ ಬೆಟ್ಟ ಪ್ರದೇಶವಾಗಿದ್ದು ಇಲ್ಲಿ 4.5 ಕಿಲೋಮೀಟರ್ ಸುರಂಗಮಾರ್ಗ ನಿರ್ಮಾಣ ಮಾಡಬೇಕಿತ್ತು ಇದು ಸರಿಸುಮಾರು 20 ಕಿಲೋಮೀಟರ್ ದೂರವನ್ನು ಕಡಿಮೆಗೊಳಿಸುತ್ತದೆ ಈ ಸುರಂಗ ಮಾರ್ಗವನ್ನು ನವಯುಗ ಇಂಜಿನಿಯರಿಂಗ್ ಕಂಪನಿ ನಿರ್ಮಾಣ ಮಾಡುತ್ತಿದ್ದು ಸಿಲಿಕಿಯ ದಿಂದ ಎರಡು ಕಿಲೋಮೀಟರ್ ಬಾರ್ ಕೋಟ್ ನಿಂದ 7.5 ಕಿಲೋಮೀಟರ್ ಒಳಗೆ ಸುರಂಗ ನಿರ್ಮಾಣ ಮಾಡಲಾಗಿತ್ತು ಇನ್ನು ಕೇವಲ 480 ಮೀಟರ್ ನಿರ್ಮಾಣ ಮಾತ್ರ ಉಳಿದಿತ್ತು ಆದರೆ ದುರದೃಷ್ಟವಶಾತ್ ನವಂಬರ್ 12ರಂದು ಬೆಳಿಗ್ಗೆ 5:30ಕ್ಕೆ ಸಿಲಿಕಿಯ ದಿಂದ 200 ಮೀಟರ್ ಒಳಗೆ ಬೆಟ್ಟ ಕುಸುದಿತ್ತು



ಆ ಸಂದರ್ಭದಲ್ಲಿ 41 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು ಕುಸಿದಿದ್ದ ಈ ಬೆಟ್ಟವು ಸುಮಾರು 60 ಮೀಟರ್ ಉದ್ದವಿತ್ತು ಅಲ್ಲದೆ ಸುರಂಗದ ಒಳಗೆ ಕೇವಲ ನಾಲ್ಕರಿಂದ ಆರು ದಿನಗಳವರೆಗೆ ಸಾಕಾಗುವಷ್ಟು ಆಮ್ಲಜನಕವಿತ್ತು ಅದಕ್ಕಾಗಿ ರಕ್ಷಣಾ ಕಾರ್ಯವನ್ನ ಅತ್ಯಂತ ವೇಗವಾಗಿ ಮಾಡಬೇಕಾಗಿತ್ತು ಅದಕ್ಕೆ ಉತ್ತರ ಕಾಂಡ್ ಸರ್ಕಾರ ಆಪರೇಷನ್ ಜಿಂದಗಿ ಎಂಬ ಕಾರ್ಯಾಚರಣೆ ಪ್ರಾರಂಭಿಸಿತು ಇದಕ್ಕೆ ಸಂಬಂಧಪಟ್ಟಂತೆ 2012ರಲ್ಲಿ ಥೈಲ್ಯಾಂಡ್ ನ ಸುರಂಗದಲ್ಲಿ ಸಿಲುಕಿಕೊಂಡಿದ್ದ 12 ವಿದ್ಯಾರ್ಥಿಗಳನ್ನು ರಕ್ಷಿಸಿದ ತಂಡವನ್ನು ಸಂಪರ್ಕಿಸಲಾಯಿತು ಅಮೆರಿಕಾದಿಂದ ಅಗರ್ ಮಶೀನ ಎಂಬ ಕೊರೆಯುವ ಯಂತ್ರವನ್ನು ತರಿಸಲಾಗಿತ್ತು ಮತ್ತು ಆಸ್ಟ್ರೇಲಿಯಾದ ಖ್ಯಾತ ಸುರಂಗ ತಜ್ಞ ಅರ್ನಾಲ್ಡ್ ಡಿಕ್ಸ್ ಅವರನ್ನು ಕರೆಯಿಸಲಾಗಿತ್ತು ಇವರೆಲ್ಲರ ಸಹಯೋಗದೊಂದಿಗೆ ಕಾರ್ಯಾಚರಣೆ ಪ್ರಾರಂಭವಾಯಿತು ಆದರೆ ತಾಂತ್ರಿಕ ತೊಂದರೆಯಿಂದ ಕಾರ್ಯಾಚರಣೆ ನಿಂತು ಹೋಯಿತು ಈ ಸಂದರ್ಭದಲ್ಲಿ ಆರು ಇಂಚಿನ ಮೂರು ಸುರಂಗಗಳನ್ನು ಕೊರೆದು ಆಮ್ಲಜನಕ ನೀರು ಮತ್ತು ಆಹಾರವನ್ನು ನೀಡಲಾಯಿತು ಹಾಗೂ ಚಿಕ್ಕ ಕ್ಯಾಮರಗಳನ್ನು ಬಳಸಿ ಒಳಗಿನ ಕಾರ್ಮಿಕರ ಪರಿಸ್ಥಿತಿಯನ್ನು ಪರಿಶೀಲಿಸಲಾಗುತ್ತಿತ್ತು ಸಂದರ್ಭದಲ್ಲಿ 20 ಮೀಟರ್ ಸುರಂಗದಲ್ಲಿದ್ದ ಕಲ್ಲು ಮಣ್ಣನ್ನು ತೆಗೆಯಲಾಗಿತ್ತು ಇನ್ನುಳಿದ 40 ಮೀಟರ್ ಸುರಂಗವನ್ನ ತೆಗೆಯುವಾಗ ಅಗರ್ ಮಶೀನ್ ಮುರಿದು ಸುರಂಗದಲ್ಲಿ ಸಿಕ್ಕಿಹಾಕಿಕೊಂಡಿತ್ತು ಇನ್ನು ಕಾರ್ಯಾಚರಣೆ ಕಷ್ಟ ಎನ್ನುವ ಸಂದರ್ಭದಲ್ಲಿ ಸಹಾಯಕ್ಕೆ ಬಂದಿದ್ದೆ ರಾಟ್ ಹೋಲ್ ಮೈನಿಂಗ್ ಪದ್ಧತಿ ಇದು ಭಾರತದಲ್ಲಿ ನಿಷೇಧಕ್ಕೆ ಒಳಗಾಗಿರುವ ಪದ್ಧತಿ ಏಕೆಂದರೆ ಈ ಪದ್ಧತಿಯ ಮೂಲಕ ಕೇವಲ ನಾಲ್ಕು ಅಡಿ ಅಗಲದ ಸುರಂಗವನ್ನು ಮಾತ್ರ ಕೊರೆಯಬಹುದು ಮೊದಲು ಈ ಸುರಂಗಗಳಲ್ಲಿ ಚಿಕ್ಕ ಮಕ್ಕಳನ್ನು ಕಳುಹಿಸುತ್ತಿದ್ದರಿಂದ ಇದನ್ನು ನಿಷೇಧಿಸಲಾಗಿತ್ತು ಆದರೆ ಈಗ ನಮ್ಮ ಕಾರ್ಮಿಕರನ್ನು ರಕ್ಷಿಸಿದ್ದು ಇದೇ ಪದ್ಧತಿ ಈ ರೀತಿಯ ಸುರಂಗ ಕೊರೆಯಲು ಸಣ್ಣ ಪ್ರಮಾಣದ ಗುದ್ದಲಿ ಮತ್ತು ಸಲಾಕೆಗಳನ್ನು ಬಳಸಲಾಗುತ್ತದೆ ಅವುಗಳನ್ನ ಬಳಸಿಕೊಂಡೆ ದಿನಾಂಕ 28.11.2023 ರಂದು ಸುರಂಗವನ್ನು ಸಂಪೂರ್ಣವಾಗಿ ಕೊರೆದು ಸಿಲುಕಿಕೊಂಡಿದ್ದ 41 ಜನ ಕಾರ್ಮಿಕರನ್ನು ಹೊರ ತೆಗೆಯಲಾಗಿದೆ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ Rat Hole Miners ಮತ್ತು ಎಲ್ಲಾ ಸಿಬ್ಬಂದಿಗೆ ಶತಕೋಟಿ ಪ್ರಣಾಮಗಳು.

– **ಎಂ.ಪರಶುರಾಮ,**
ಉಪನ್ಯಾಸಕರು

# ಜೋಡಿ ರಥ ನಿರ್ಮಾಣಕ್ಕೆ 1.5 ಕೋಟಿ ರೂ ದೇಣಿಗೆ

## ಗಣಿ ಮಾಲೀಕರು ದಾನಿಗಳಾದ ಶ್ಯಾಮಸಿಂಗ್, ಜಯರಾಜ್‌ಸಿಂಗ್‌ಗೆ ದೇವಸ್ಥಾನದವತಿಯಿಂದ ಸನ್ಮಾನ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪಟ್ಟಣದಇತಿಹಾಸಪ್ರಸಿದ್ಧಶ್ರೀಲಕ್ಷ್ಮೀನಾರಾಯಣಸ್ವಾಮಿ ಹಾಗು ಶ್ರೀ ಆಂಜನೇಯಸ್ವಾಮಿ ಜೋಡಿರಥಗಳು ಶಿಥಿಲವಾಗಿದ್ದು, ಹೊಸ ರಥಗಳ ನಿರ್ಮಾಣ ಇನ್ಯಾವಗೋ ಎನ್ನುತ್ತಿದ್ದ ಈ ಭಾಗದ ಭಕ್ತರಿಗೆ ಶುಭ ಘಳಿಗೆ ಕೂಡಿ ಬಂದಿದೆ.

ಭವ್ಯವಾದ ನೂತನ ಜೋಡಿ ರಥಗಳ ನಿರ್ಮಾಣಕ್ಕೆ ಹೊನ್ನಿ, ತೇಗ, ಬೋಗಿ ತಳಿಯ ಬೃಹತ್ ಗಾತ್ರದ ಮರದ ದಿನ್ನೆಗಳನ್ನು ಹೊತ್ತ ಎರಡು ಲಾರಿಗಳು ತೀರ್ಥಹಳ್ಳಿ ಕಡೆಯಿಂದ ಗುರುವಾರ ಪಟ್ಟಣಕ್ಕೆ ಆಗಮಿಸುತ್ತಿದ್ದಂತೆ ಭಕ್ತರ ಸಂಭ್ರಮ ಮುಗಿಲು ಮುಟ್ಟಿತು. ಐತಿಹಾಸಿಕ ನಾರಾಯಣದೇವರಕೆರೆ ಹಾಗೂ ಸುತ್ತಲಿನ ಜನತೆಯ ಹೊಸ ತೇರುಗಳನ್ನು ನೋಡ ಬೇಕೆನ್ನುವ ಬಹು ದಿನದ ಕನಸು ನನಸಾಗಲಿದೆ.

ಜೋಡಿ ರಥಗಳ ನಿರ್ಮಾಣಕ್ಕೆ ಬೇಕಾದ ಮರದ ದಿಮ್ಮೆಗಳನ್ನು ಹೊತ್ತು ತರುತ್ತೀರುವ ಎರಡು ಲಾರಿಗಳು ಬರುವ ವಿಚಾರ ವಾರದ ಹಿಂದೆಯೇ ಗೊತ್ತಾಗಿತ್ತು. ಹೀಗಾಗಿ ಈ ಶುಭ ಘಳಿಗೆಯನ್ನು ಕಣ್ಣತುಂಬಿಕೊಳ್ಳಲು ಬೆಳಿಗಿನಿಂದಲೇ ಪಟ್ಟಣದ ಹದಿನೆಂಟು ವಾರ್ಡ್‌ಗಳು ಸೇರಿದಂತೆ ಮರಿಯಮ್ಮನಹಳ್ಳಿ ಫೀರ್ಕಾದ ಸುತ್ತಲಿನ ಗ್ರಾಮಗಳಿಂದ ನೂರಾರು ಜನರು ಲಕ್ಷ್ಮೀನಾರಾಯಣ ಹಾಗು ಅಂಜನೇಯ ದೇವಸ್ಥಾನದ ಆವರಣದ ಸುತ್ತಲೂ ನೆರೆದಿದ್ದರು. ದಿನ್ನೆ ಹೊತ್ತ ಲಾರಿಗಳು ಪುರ ಪ್ರವೇಶಿಸುತ್ತಿದ್ದಂತೆಯೇ ಗೋವಿಂದ, ಗೋವಿಂದ, ಲಕ್ಷ್ಮೀನಾರಾಯಣ, ಅಂಜನೇಯ ಸ್ವಾಮಿಗಳಿಗೆ ಜೈಕಾರ ಘೋಷಣೆಗಳು ನೆರೆದಿದ್ದ ಜನಸ್ತೋಮದ ನಡುವಿನಿಂದ ಏಕಕಾಲಕ್ಕೇನೆ ಹೊರ ಹೊಮ್ಮಿದವು.

**ಭವ್ಯ ಸ್ವಾಗತ:**

ರಥದ ಮರಹೊತ್ತ ಲಾರಿಗಳಿಗೆ ಭವ್ಯ ಸ್ವಾಗತ ಕೋರಲಾಯ್ತು, ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಕರೆದೊಯ್ದು ಪೂಜೆ ನೇರವೇರಿಸಲಾಯ್ತು. ಪಟ್ಟಣದ ಮುಖಂಡರಾದ ಗೊವಿಂದರ ಪರಶುರಾಮ, ಎನ್.ಸತ್ಯನಾರಾಣ, ಚಿದ್ರಿ ಸತೀಶ್, ಉರುವಕೊಂಡ ಎಂ.ವೆಂಕಟೇಶ, ಕೆ.ರಘುವೀರ್, ಗಂಗಾವತಿ ಸತ್ಯನಾರಾಯಣಶೆಟ್ಟಿ, ಎನ್.ಸಚ್ಚಿದಾನಂದ ಶೆಟ್ಟಿ, ಚುಕ್ಕಿನಾಗೇಶ್, ಡಾ.ಎರಿಸ್ವಾಮಿ, ಗುಂಡಾಸ್ವಾಮಿ, ಈಡಿಗರ ನಾಗರಾಜ, ತಳವಾರ ಹುಲುಗಪ್ಪ, ಎಲೆಗಾರ ಮಂಜುನಾಥ, ಸಜ್ಜೇದ ವಿಶ್ವನಾಥ ಸೇರಿದಂತೆ ದೇವಸ್ಥಾನದ ಆಡಳಿತಾಧಿಕಾರಿ, ಉಪ ತಹಶಿಲ್ದಾರ ಹೆಚ್. ನಾಗರಾಜ ಸೇರಿದಂತೆ ಹಲವರು ಪೂಜಾಕಾರ್ಯದಲ್ಲಿ ಭಾಗವಹಿಸಿದ್ದರು.

**ಸನ್ಮಾನ:** ಒಂದು ನೂತನ ರಥ ನಿರ್ಮಾಣಕ್ಕೆ ಒಂದೂವರೇ ಕೋಟಿ ರೂಪಾಯಿ ವೆಚ್ಚ ತಗುಲಿದೆ ಎಂದು ಅಂದಾಜಿಸಲಾಗಿದೆ. ಹೊಸಪೇಟೆ ಗಣಿ ಮಾಲೀಕರಾದ ಶಾಮ್‌ಸಿಂಗ್ ಅವರು ಒಂದು ತೇರು ನಿರ್ಮಾಣದ ಸಂಪೂರ್ಣ ಖರ್ಚುನ್ನು ದಾನ ನೀಡಿದ್ದಾರೆ. ಇನ್ನೋರ್ವ ಗಣಿ ಮಾಲೀಕರಾದ ಜಯರಾಜ್ ಸಿಂಗ್ ಐವತ್ತು ಲಕ್ಷ ರೂಪಾಯಿ ದಾನ ಕೊಡಲು ಒಪ್ಪಿದ್ದಾರೆ. ಇದೇ ವೇಳೆ ದಾನಿಗಳನ್ನು ದೇವಸ್ಥಾನ ಸಮಿತಿ ಹಾಗು ಊರಿನ ದೈವಸ್ಥರ ಪರವಾಗಿ ಸನ್ಮಾನಿಸಲಾಯ್ತು.



### ತೇರಿನ ಎತ್ತರ

ಲಕ್ಷ್ಮೀನಾರಾಯಣಸ್ವಾಮಿಯ ರಥವು 22ವರೆ ಅಡಿಗಳಷ್ಟು ಎತ್ತರ, ಆಂಜನೇಯ ಸ್ವಾಮಿ ರಥವು 19 ಅಡಿಗಳ ಎತ್ತರ ಇರಲಿದೆ. ಉಡುಪಿಯ ರಥಶಿಲ್ಪಿ ರಾಜಶೇಖರ ಹೆಬ್ಬಾರ ರಥ ನಿರ್ಮಾಣವನ್ನು ನಿರ್ವಹಿಸಲಿದ್ದಾರೆ. ಪಟ್ಟಣದ ಹೊರವಲಯದ ಬಳಿಯ ಎಪಿಎಂಸಿ ಹತ್ತೀರ ಇರುವ ನಾಡ ಕಚೇರಿ ಬಳಿ ಒಂದು ಎಕರೆ ಜಾಗದಲ್ಲಿ ಶೆಡ್ ನಿರ್ಮಿಸಿ, ಅಲ್ಲಿಯೇ ರಥ ನಿರ್ಮಾಣ ಕಾರ್ಯ ನಡೆಯಲಿದೆ. ನಿರ್ಮಾಣಕ್ಕೆ ಎಂಟು ತಿಂಗಳು ಕಾಲವಕಾಶ ನೀಡಲಾಗಿದೆ.

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಚಾನಲ್
FREE!
hampitimes epaper
save your mobile space !
SCAN QR CODE TO JOIN FOLLOW
HAMPI TIMES
whatsapp channel

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ಬಳ್ಳಾರಿಯಲ್ಲಿ ಸಂಭ್ರಮದ ಸಂತ ಶ್ರೇಷ್ಠ ಕವಿ ಭಕ್ತ ಕನಕದಾಸರ 536ನೇ ಜಯಂತಿ

**ಹಂಪಿ ಟೈಮ್ಸ್ ಬಳ್ಳಾರಿ,**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಗುರುವಾರ ಸಂತ ಶ್ರೇಷ್ಠ ಕವಿ ಭಕ್ತ ಕನಕದಾಸ ಜಯಂತ್ಯೋತ್ಸವದ ಮೆರವಣಿಗೆಯು ಅದ್ದೂರಿಯಾಗಿ, ಸಂಭ್ರಮದಿಂದ ನಡೆಯಿತು. ನಗರದ ಅಗ್ನಿಶಾಮಕ ದಳ ಕಚೇರಿ ಹತ್ತಿರ ಕನಕದಾಸ ವೃತ್ತದ ಭಕ್ತ ಕನಕದಾಸ ಅವರ ಪುತ್ಥಳಿಗೆ ಯುವ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಮಾಡಿದರು. ಡಮರುಗ, ಡೊಳ್ಳು ಬಾರಿಸಿ ಸಂಭ್ರಮಿಸುವ ಮೂಲಕ ಅದ್ದೂರಿ ಮೆರವಣಿಗೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಮಹಾನಗರ ಪಾಲಿಕೆ ಉಪ ಮೇಯರ್ ಬಿ.ಜಾನಕಿ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಸಹಾಯಕ ಆಯುಕ್ತ ಹೇಮಂತ್ ಕುಮಾರ್, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರಾ ಸೇರಿದಂತೆ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಕುರುಬ ಸಮಾಜದ ಮುಖಂಡರುಗಳು ಇದ್ದರು.

ಮೆರವಣಿಗೆಯಲ್ಲಿ ವೀರಗಾಸೆ, ಡೊಳ್ಳು ಕುಣಿತ, ಕಹಳೆ ವಾದನ, ಗೊರವರ ಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಗಮನಸೆಳೆದವು.

ಜಯಂತಿಯ ಮೆರವಣಿಗೆಯು ಕನಕದಾಸ ವೃತ್ತದಿಂದ ಆರಂಭವಾಗಿ ಎಸ್‌ಪಿ ಸರ್ಕಲ್ ಮಾರ್ಗವಾಗಿ ಗಡಿಗಿ ಚೆನ್ನಪ್ಪ ವೃತ್ತದ ಮೂಲಕ ರಾಘವ ಕಲಾ ಮಂದಿರದ ವೇದಿಕೆ ಸಭಾಂಗಣದವರೆಗೆ ತಲುಪಿತು.

## ಕ್ರೀಡಾ ತರಬೇತಿದಾರರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಹಿರಿಯ ಕ್ರೀಡಾಪಟು/ತರಬೇತುದಾರರಾಗಿ ಸಾಧನೆ ಮಾಡಿರುವ ಕ್ರೀಡಾಪಟುಗಳಿಂದ ಜೀವಮಾನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ತರಬೇತುದಾರರುಗಳಿಂದ ಜೀವಮಾನ ಸಾಧನೆ ಪ್ರಶಸ್ತಿ ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲು ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗಳಿಗಾಗಿ ಸೇವಾಸಿಂಧು (https://sevasindhuservices.karnataka.gov.in) ಮೂಲಕ ಆನಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

## ಶ್ರೀ ವಾಲ್ಮೀಕಿ ಜಾತ್ರೆಗೆ ಸಹಕಾರ

### ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿಕೆ | ಪೂರ್ವಸಿದ್ಧತಾ ಸಭೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಜನರನ್ನು ಜಾಗೃತರನ್ನಾಗಿಸಲು ನಡೆಯುವ ವಾಲ್ಮೀಕಿ ಜಾತ್ರೆಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ತಿಳಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರೆಯ ಪೂರ್ವಸಿದ್ದತಾ ಸಭೆ ಹಾಗೂ ಜನ ಜಾಗೃತಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಕ್ಷೇತ್ರದಲ್ಲಿ ಪರಿಶಿಷ್ಟಜನಾಂಗದವರೇ ಹೆಚ್ಚಾಗಿದ್ದು ಇನ್ನೂ ಅನೇಕ ಗ್ರಾಮಗಳಲ್ಲಿ ಸೌಲಭ್ಯ ವಂಚಿತರಾಗಿ ಜೀವಿಸುತ್ತಿದ್ದಾರೆ. ಅವರಿಗೆ ಮೂಲ ಸೌಕರ್ಯಗಳೆ ಮುಟ್ಟುತ್ತಿಲ್ಲ. ಇದರಿಂದ ಸಮಾಜದ ಉನ್ನತಿಗೆ ಹಿನ್ನಡೆಯಾಗುತ್ತಿದೆ. ಆ ನಿಟ್ಟಿನಲ್ಲಿ ಸಮಾಜದ ಗುರುಗಳಾದ ಪ್ರಸನ್ನನಾಂದ ಪುರಿ ಸ್ವಾಮಿಗಳು ಜಾತ್ರೆಗಳ ನೆಪದಲ್ಲಿ ಅಂತಹ ಗ್ರಾಮಗಳ ವಾಲ್ಮೀಕಿ ಜನರನ್ನು ಜಾಗೃತಿ ಗೊಳಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ತಿಳಿಸಿದರು. ಜಾತ್ರೆಯು ಐತಿಹಾಸಿಕವಾಗಿ ತಳ ಸಮಾಜದ ಅಭ್ಯುದಯಕ್ಕೆ ಕಾರಣವಾಗಲಿ ಎಂದು ಶುಭ ಹಾರೈಸಿ 50 ಸಾವಿರ ರೂಪಾಯಿಗಳ ದೇಣಿಗೆ ನೀಡಿದರು.

ಪ್ರಸಕ್ತ ಸಾಲಿನ ಜಾತ್ರಾ ಸಮಿತಿಯ ತಾಲೂಕು ಅಧ್ಯಕ್ಷ ಮಂಜು ಮಯೂರ ಮಾತನಾಡಿ, ಈ ಸಾಲಿನ ವಾಲ್ಮೀಕಿ ಜಾತ್ರೆಯು ಸಮುದಾಯದ ಕಟ್ಟ ಕಡೆಯ ವ್ಯಕ್ತಿಗೂ ತಲುಪಿಸುವ ಜವಾಬ್ದಾರಿ ಹೊತ್ತು ತಾಲೂಕಿನ ಪ್ರತಿ ವಾಲ್ಮೀಕಿ ಮನೆಗೂ ಭೇಟಿ ನೀಡಿ ಅವರ ಕಷ್ಟ ಗಳಿಗೆ ಸ್ಪಂದಿಸಿ ಅವರಿಗೆ ಸವಲತ್ತುಗಳನ್ನು ಒದಗಿಸಲು ಸಹಕರಿಸಿ ಅವರನ್ನು ಜಾತ್ರೆಯ ನೆಪದಲ್ಲಿ ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸುವೆ ಎಂದರು.

ಜಾತ್ರೆ ಎಂದರೆ ಬರೀ ದೇಣಿಗೆ ಎಂದು ಭಾವಿಸದೇ ಸಮಾಜವು ಮೊದಲು ಒಗ್ಗೂಡಬೇಕಿದೆ. ಇದರಿಂದ ಅವರ ಕಷ್ಟಗಳು ಮೊದಲು ನಮಗೆ ಅರಿವಾಗಬೇಕಿದೆ. ಇದರಿಂದ ಅವರಿಗೆ ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗಲಿದೆ.ಮ ವಾಲ್ಮೀಕಿ ಜಾತ್ರೆಯೂ ಸಮಾಜದಲ್ಲಿ ತುಳಿತಕ್ಕೆ ಒಳಗಾದವರನ್ನು ಜಾಗೃತಿ ಮೂಡಿಸಿ ಅವರ ಬದುಕಲ್ಲಿ ಆಶಾಭಾವನೆ ಮೂಡಿಸುವ ಪ್ರಯತ್ನ ಶ್ರೀ ಪ್ರಸನ್ನನಾಂದ ಪುರಿಗಳ ಧ್ಯೇಯವಾಗಿದೆ. ಆದ್ದರಿಂದ ಮುಂಬರುವ ದಿನಗಳಲ್ಲಿ ವಾಲ್ಮೀಕಿ ಬಂಧುಗಳ ಪ್ರತಿ ಮನೆಗೂ ಭೇಟಿ ನೀಡಿ ಸಂಘಟಿಸಿ ಅವರಿಂದ ದವಸ, ಧಾನ್ಯಗಳನ್ನು ಸ್ವೀಕರಿಸಿ ಸಮಾಜಕ್ಕೂ ಅವರ ಕೊಡುಗೆಯನ್ನ ಸ್ಮರಣೀಯವಾಗಿಸಿ ಜಾತ್ರೆಯನ್ನು ಐತಿಹಾಸಿಕ ಜಾತ್ರೆಯಾಗಿ ರೂಪಿಸಲು ಸಮುದಾಯದ ಸರ್ವರೂ ಕೈಜೋಡಿಸಲು ಈ ಸಂಧರ್ಭದಲ್ಲಿ ಕೋರಿದರು. ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾದ ತಾಲೂಕು ಅಧ್ಯಕ್ಷ ಎಸ್.ಸುರೇಶ್, ಸಪಪೂ ಕಾಲೇಜಿನ ಪ್ರಾಚಾರ್ಯೆ ಟಿ.ಕೊತ್ಲಮ್ಮ ವೇದಿಕೆಯಲ್ಲಿದ್ದರು. ಮುಖಂಡರಾದ ಎನ್.ಟಿ.ತಮ್ಮಣ್ಣ, ದೀನಾ ಮಂಜುನಾಥ, ಕಾವಲಿ ಶಿವಪ್ಪನಾಯಕ, ಪಿ.ಚಂದ್ರು, ಬಿ.ಭೀಮೇಶ್,ಸಿರಬಿ ಮಂಜುನಾಥ, ಮ್ಯಾಕಿ ಚಂದ್ರು, ಬಿ.ರಾಘವೇಂದ್ರ, ಸಿ.ಬಿ.ಜಯರಾಮ ನಾಯಕ, ಕೆ. ಈಶಪ್ಪ,ಕಡ್ಡಿ ಮಂಜುನಾಥ, ಕೆ.ಹನುಮಂತಪ್ಪ, ಗ್ಯಾಸ್ ವೆಂಕಟೇಶ್, ಹೊನ್ನೆಶ್,ಢಾಣಿ ರಾಘವೇಂದ್ರ, ಗುಜ್ಜಲ ಗಣೇಶ, ವಿ.ಪ್ರಕಾಶ್, ಸಿ.ಬಿ.ಗುರು, ಎಚ್.ವೀರಣ್ಣ, ಕಾಟೇರ್ ಹಾಲೇಶ್, ಕುಸ್ತಿ ದುರುಗಪ್ಪ,ಅಂಜಿ ಭಯ್ಯಾ, ಹಾದಿಮನೆ ಕೊಟ್ರೇಶ್, ಎಸ್.ರಾಘು, ಆರ್. ಅಜೇಯ್, ಮಲ್ಲಾಪುರದ ನಾಗರಾಜ್, ಗುಂಡವ್ವರ ಶಿವಕುಮಾರ್, ಸತೀಶ್, ಗುರಿಕಾರ ರಾಘವೇಂದ್ರ, ಎನ್.ಅಜೇಯ್ ಸೇರಿದಂತೆ ನೂರಾರು ವಾಲ್ಮೀಕಿ ಯುವಕರು ಇದ್ದರು.

## ಬಳ್ಳಾರಿ ಜಿಲ್ಲೆಯಲ್ಲಿ 6 ವರ್ಷಗಳಲ್ಲಿ 2388 ಹೆಚ್‌ಐವಿ ಸೋಂಕು ದೃಢ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ 2017ರಿಂದ ಅಕ್ಟೋಬರ್ 2023 ರವರೆಗೆ ಒಟ್ಟಾರೆ 682567 ಜನರು ಐ.ಸಿ.ಟಿ.ಸಿ ಕೇಂದ್ರಗಳಲ್ಲಿ ಆಪ್ತಸಮಾಲೋಚನೆ ಪಡೆದು ರಕ್ತ ಪರೀಕ್ಷೆಗೆ ಒಳಪಟ್ಟಿದ್ದು, ಅವರಲ್ಲಿ 2388 ಜನರಿಗೆ ಹೆಚ್.ಐ.ವಿ ಸೋಂಕು ಇರುವುದು ದೃಢಪಟ್ಟಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶ್ ಬಾಬು ಅವರು ತಿಳಿಸಿದರು.

ಅವರು, ನಗರದ ಜಿಲ್ಲಾ ಆಸ್ಪತ್ರೆಯ ಆವರಣದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ 2 ಎಆರ್ ಟಿ ಕೇಂದ್ರಗಳು ಮತ್ತು 7 ಲಿಂಕ್ ಎಆರ್ ಟಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 17336 ಸೋಂಕಿತರಿಗೆ ಪ್ರೀ ಎಆರ್ ಟಿ ದಾಖಲೆ ಮಾಡಿಕೊಂಡಿದ್ದು, ಇವರಲ್ಲಿ ಪ್ರಸ್ತುತ 5030 ಜನರು ಚಿಕಿತ್ಸೆಯನ್ನು ಮುಂದುವರಿಸಿದ್ದು, ಸುಮಾರು 4218 ಜನರು (1988ರಿಂದ ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ) ಇದುವರೆಗೆ ಸಾವನ್ನಪ್ಪಿದ್ದಾರೆ ಎಂದು ಅವರು ತಿಳಿಸಿದರು.

ಹೆಚ್.ಐ.ವಿ/ಏಡ್ಸ್ ನಿಂದ ಉಂಟಾಗುತ್ತಿರುವ ಸಾವನ್ನು ಸೊನ್ನೆಗೆ ತರಲು ಹಾಗೂ ಹೆಚ್.ಐ.ವಿ/ಏಡ್ಸ್ ನಿಂದ ಉಂಟಾಗುತ್ತಿರುವ ಕಳಂಕ ಹಾಗೂ ತಾರತಮ್ಯಗಳನ್ನು ಸೊನ್ನೆಗೆ ತರಲು, ಸೊನ್ನೆಗೆ ತನ್ನಿ ಎಂಬ ಧ್ಯೆಯ ವಾಕ್ಯವನ್ನಿಟ್ಟುಕೊಂಡು ಆರೋಗ್ಯ ಇಲಾಖೆಯಿಂದ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಎಂದರು.


ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ನಿರ್ವಾಹಕ ಘಟಕದ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಇಂದ್ರಾಣಿ ಅವರು ಮಾತನಾಡಿ, ಬಳ್ಳಾರಿ ಜಿಲ್ಲೆಯು ಹೆಚ್.ಐ.ವಿ ಏಡ್ಸ್ ನಿಯಂತ್ರಣಾ ಮತ್ತು ನಿರ್ವಾಹಕ ಘಟಕವು ರಾಜ್ಯದಲ್ಲಿಯೇ ಮಾದರಿಯಾಗಿದ್ದು, 2022ರಲ್ಲಿ ಅತ್ಯುತ್ತಮ ಡ್ಯಾಪ್‌ಕು ಎಂದು ರಾಜ್ಯ ಮಟ್ಟದ ಪ್ರಶಸ್ತಿ ಲಭಿಸಿದೆ ಎಂದು ಹೇಳಿದರು.

### ಬಳ್ಳಾರಿ ಜಿಲ್ಲೆಯಲ್ಲಿ 08 ಮಕ್ಕಳಿಗೆ ಹೆಚ್‌ಐವಿ ಸೋಂಕು:

ಹೆಚ್.ಐ.ವಿ ಸೋಂಕಿತ ಗರ್ಭಿಣಿ ಸ್ತ್ರೀಗೆ ಜನಿಸಿದ ಮಕ್ಕಳಿಗೆ 6 ವಾರ, 6 ತಿಂಗಳು, 12 ತಿಂಗಳು ಮತ್ತು 18 ತಿಂಗಳ ಅನುಸರಣೆ ಮಾಡಿ ಡಿ.ಬಿ.ಎಸ್ ಪರೀಕ್ಷೆಯನ್ನು ಐಸಿಟಿಸಿ ಕೇಂದ್ರಗಳಲ್ಲಿ ಮಾಡಲಾಗುತ್ತದೆ. ಈ ಡಿ.ಬಿ.ಎಸ್ ಪರೀಕ್ಷೆಯಿಂದ ಮಕ್ಕಳಲ್ಲಿ ಸೋಂಕು ಇದೆಯೋ ಅಥವಾ ಇಲ್ಲವೋ ಎಂಬುವುದನ್ನು ಪತ್ತೆಹಚ್ಚಬಹುದಾಗಿದೆ. ಇಂತಹ ಕೇಂದ್ರಗಳನ್ನು ಇ.ಐ.ಡಿ ಕೇಂದ್ರಗಳೆಂದು ಕರೆಯಲಿದ್ದು, ಜಿಲ್ಲೆಯಲ್ಲಿ 10 ಇಐಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದರು.

ಇಐಡಿ ಕೇಂದ್ರಗಳಲ್ಲಿ 2010 ರಿಂದ 2023 ಅಕ್ಟೋಬರ್ ವರೆಗೆ 696 ಮಕ್ಕಳಿಗೆ 6 ವಾರದ ಡಿ.ಬಿ.ಎಸ್ ಪರೀಕ್ಷೆಯನ್ನು ಮಾಡಿಸಲಾಗಿದ್ದು, ಇವರಲ್ಲಿ 30 ಮಕ್ಕಳಿಗೆ ಹೆಚ್.ಐ.ವಿ ಸೋಂಕು ಇರುವುದು ಕಂಡುಬಂದಿದೆ. ಇಲ್ಲಿಯವರೆಗೆ 577 ಮಕ್ಕಳನ್ನು 18 ತಿಂಗಳ ನಂತರ ಹೆಚ್.ಐ.ವಿ ಪರೀಕ್ಷೆಗೆ ಒಳಪಡಿಸಲಾಗಿದ್ದು, ಇವರಲ್ಲಿ 08 ಮಕ್ಕಳಿಗೆ ಹೆಚ್.ಐ.ವಿ ಇರುವುದು ದೃಢಪಟ್ಟಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಬಳ್ಳಾರಿ ಜಿಲ್ಲೆಯಲಿ ಪ್ರಸ್ತುತ ನಗರ ಕೇಂದ್ರಗಳಲ್ಲಿ 2516, ಗ್ರಾಮೀಣ ಭಾಗದಲ್ಲಿ 587 ಮಹಿಳಾ ಲೈಂಗಿಕ ಕಾರ್ಯಕರ್ತರು ಹಾಗು 715 ಎಮ್‌ಎಸ್‌ಎಮ್ ಜನರಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ 2023-24 (ಸೆಪ್ಟೆಂಬರ್ 2023 ರವರೆಗೆ) ಸಾಲಿನಲ್ಲಿ 2242 ಲೈಂಗಿಕ ಕಾರ್ಯಕರ್ತರಿಗೆ ಹೆಚ್.ಐ.ವಿ ಪರೀಕ್ಷೆ ಮಾಡಿಸಿದ್ದು, 1 ಹೆಚ್.ಐ.ವಿ ಸೋಂಕು ತಗಲಿದೆ. ಎಂಎಸ್‌ಎಂ ಗೆ ಸಂಬಂಧಿಸಿದಂತೆ 715 ಗುರಿ ಇದ್ದು, ಇವರಲ್ಲಿ 628 ಜನರಿಗೆ ಹೆಚ್.ಐ.ವಿ ಪರೀಕ್ಷೆ ಮಾಡಿಸಿದ್ದು, 2 ಹೆಚ್.ಐ.ವಿ ಸೋಂಕು ತಗಲಿದೆ ಎಂದು ತಿಳಿಸಿದರು.



ವಿಶ್ವ ಆರೋಗ್ಯ ಸಂಸ್ಥೆಯು 1988 ರಿಂದ ಡಿಸೆಂಬರ್ 1 ಅನ್ನು ವಿಶ್ವ ಏಡ್ಸ್ ದಿನವನ್ನಾಗಿ ಆಯೋಜಿಸುತ್ತಾ ಬಂದಿದೆ. ಹೆಚ್‌ಐವಿ, ಏಡ್ಸ್ ಸೊಂಕನ್ನು ಸೊನ್ನೆಗೆ ತರಲು ಸರ್ಕಾರವು ಉದ್ದೇಶಿಸಿದ್ದು, "ಸಮುದಾಯಗಳು ಮುನ್ನೆಡಸಲಿ" ಎಂಬುದು ಈ ವರ್ಷದ ಘೋಷಣೆಯಾಗಿದೆ. ಈ ನಿಟ್ಟಿನಲ್ಲಿ ಸೋಂಕಿನ ತಡೆಗೆ ಸಾಕಷ್ಟು ಜಾಗೃತಿ ಮತ್ತು ಅರಿವು ಮೂಡಿಸುವ ಕೆಲಸಗಳಾಗುತ್ತಿವೆ ಎಂದು ತಿಳಿಸಿದರು.

ಹೆಚ್‌ಐವಿ/ಏಡ್ಸ್, ಲೈಂಗಿಕ ಸೋಂಕು ಮತ್ತು ಕಾಂಡೋಮ್-ನಿರೋದ್ ಬಳಕೆಯ ಬಗ್ಗೆ ಅರಿವು ಮೂಡಿಸುವುದು. ಲೈಂಗಿಕ ಸೋಂಕುಗಳ ಚಿಕಿತ್ಸೆಗಾಗಿ ಸರ್ಕಾರದ ಆರೋಗ್ಯ ವ್ಯವಸ್ಥೆಯ ಸಹಯೋಗದೊಡನೆ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವುದು. ಪ್ರತಿ ಮೂರು ತಿಂಗಳಿಗೊಮ್ಮೆ ಲೈಂಗಿಕ ಸೋಂಕಿಗೆ ನಿರಂತರ ತಪಾಸಣೆ ಮತ್ತು ಪ್ರತಿ ಆರು ತಿಂಗಳಿಗೊಮ್ಮೆ "ಹೆಚ್‌ಐವಿ ರಕ್ತಪರೀಕ್ಷೆ ಮಾಡಿಸಿಕೊಳ್ಳುವಂತೆ ಮನವೊಲಿಸುವುದು. ಹೆಚ್‌ಐವಿ ಪಾಸಿಟಿವ್ ಆದ ವ್ಯಕ್ತಿಗಳು, ಅವರ ಕುಟುಂಬದವರು ಮತ್ತು ಮಕ್ಕಳಿಗೆ ಮಾನಸಿಕ, ಸಾಮಾಜಿಕ ಮತ್ತು ಆರ್ಥಿಕ ಬೆಂಬಲ ಸಿಗುವಂತೆ ಮಾಡುವುದು ಸೇರಿದಂತೆ ಇತರೆ ಕಾರ್ಯ ಚಟುವಟಿಕೆ ನಡೆಯುತ್ತಿದೆ. ಡಿ.01ರಂದು ನಡೆಯುವ ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಜಿಲ್ಲೆಯಲ್ಲಿ ಏಡ್ಸ್ ನಿರ್ಮೂಲನೆಗಾಗಿ ಆಪ್ತಸಮಾಲೋಚನೆ ಹಾಗೂ ಜಾಗೃತಿ ಮೂಡಿಸುವ, ಮುಖ್ಯ ವಾಹಿನಿಗೆ ತರಲು, ಸೋಂಕು ಪರೀಕ್ಷೆ ಕೈಗೊಂಡ, ಉತ್ತಮ ಮೇಲ್ವಿಚಾರಣೆ, ಹೆಚ್‌ಐವಿ ಸಮುದಾಯಕ್ಕೆ ಬೆಂಬಲ ನೀಡಿದ ಸೇವೆ ಪರಿಗಣಿಸಿ ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಜಿಲ್ಲಾ ಡ್ಯಾಪ್ಕೂ ಮೇಲ್ವಿಚಾರಕ ಗಿರೀಶ್, ಡಿಹೆಚ್‌ಓರ ಆಪ್ತ ಸಹಾಯಕ ಮಹೇಶ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸಿಎಂ ಸಿದ್ದರಾಮಯ್ಯರ ಚಾಣಕ್ಯತನ ಮಾದರಿ

**ಹಂಪಿ ಟೈಮ್ಸ್ ಬಳ್ಳಾರಿ**

ಭಕ್ತ ಕನಕದಾಸರ ತಾತ್ವಿಕತೆಯ ಚಿಂತನೆ, ಸಂಗೊಳ್ಳಿ ರಾಯಣ್ಣನ ಧೈರ್ಯ ಹಾಗೂ ಇದೇ ಸಮುದಾಯದ ಮುಖ್ಯಮಂತ್ರಿ ಸಿದ್ದರಾಮಯ್ಯರ ಚಾಣಕ್ಯತನ ಮಾದರಿಯಾಗಿದ್ದು, ಮಹನೀಯರ ಆದರ್ಶ ನಮಗೆಲ್ಲ ಸ್ಪೂರ್ತಿಯಾಗಬೇಕು ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಸಂತ ಶ್ರೇಷ್ಠ ಕವಿ ಭಕ್ತ ಕನಕದಾಸ 536ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕನಕದಾಸರ ಆಧ್ಯಾತ್ಮಕ ವಿಷಯಗಳಿಂದ ಸಮಾಜದ ತಲ್ಲಣಕ್ಕೆ ಕಾರಣವಾಯಿತು. ಅದೇ ರೀತಿಯಾಗಿ ಸಂಗೋಳ್ಳಿ ರಾಯಣ್ಣನಂತಹ ಪರಾಕ್ರಮಿಯು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಯುದ್ಧಗಳನ್ನು ಎದುರಿಸಿದನು. ನಮ್ಮ ನಾಡಿನ ಮುಖ್ಯಮಂತ್ರಿಯವರು ಅದೇ ಸಮುದಾಯದವರಾಗಿದ್ದು, ನಾಡಿನ ಅಭಿವೃದ್ಧಿಗೆ ಒತ್ತು ನೀಡಿ, ಹಲವಾರು ಯೋಜನೆಗಳನ್ನು ರೂಪಿಸಿದ್ದಾರೆ. ಈ ಸಮುದಾಯದವರು, ಸರ್ಕಾರದ ಯೋಜನೆಗಳನ್ನು ಬಳಸಿಕೊಂಡು ಸಾಮಾಜಿಕ, ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಮಾತನಾಡಿದರು. ಕನ್ನಡ ಪ್ರಾಧ್ಯಾಪಕ ಬಿ. ಎರ್ರಿಸ್ವಾಮಿ ಅವರು ಕನಕದಾಸ ಜಯಂತಿಯ ವಿಶೇಷ ಉಪನ್ಯಾಸ ನೀಡಿದರು. ಮಹಾನಗರ ಪಾಲಿಕೆ ಉಪಮೇಯರ್ ಬಿ.ಜಾನಕಿ, ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರಾ, ಪಾಲಿಕೆ ಸದಸ್ಯೆ ಈರಮ್ಮ ಸುರೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಹೊನ್ನುರಪ್ಪ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಗಾದಿಲಿಂಗನಗೌಡ ಸೇರಿದಂತೆ ಪಾಲಿಕೆ ಸದಸ್ಯರು, ಜನಪ್ರತಿನಿಧಿಗಳು, ಮುಖಂಡರು ಹಾಗೂ ಮತ್ತಿತರು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA